ANANTHKUMAR PRATISHTHANA

# ಅನಂತಪಥ

ಸಂಪುಟ - 2 ಸೆಪ್ಟೆಂಬರ್ - 2021 ಸಂಚಿಕೆ - 3

ಸಂಸ್ಕಾರವನ್ನು ಮೈಗೂಡಿಸಿಕೊಂಡು ಬೆಳೆದ ನಾಯಕ



ನಾನು ಕಂಡ ಅನಂತಕುಮಾರ್ ಮಾಲಿಕೆಯಲ್ಲಿ ಪುಟ-3

ಶ್ರೀ ವಿ. ನಾಗರಾಜ್

## ಸಂಸದೀಯ ವ್ಯವಹಾರಗಳ ಕುಶಲ ನಿರ್ವಹಣೆಗೊಂದು ಮಾದರಿ




ಸಂಸದೀಯ ವ್ಯವಹಾರಗಳ ಸಚಿವಾಲಯದ ಜಾಲತಾಣವನ್ನು ಜಾಲಾಡಿದರೆ ಸಚಿವಾಲಯದ ಅಧಿಕೃತ ಮುನ್ನೋಟ ದೊರೆಯುತ್ತದೆ. "ಸಂಸತ್ತು, ಅದರ ಸದಸ್ಯರು, ವಿವಿಧ ಸಚಿವಾಲಯಗಳು ಮತ್ತು ಇಲಾಖೆಗಳು, ಸರಕಾರದ ವಿವಿಧ ಸಂಸ್ಥೆಗಳು ಮತ್ತು ರಾಜ್ಯಸರಕಾರಗಳಿಗೆ ಉತ್ತಮ ಗುಣ ಮಟ್ಟದ ಸಮಗ್ರ ಸೇವೆಯನ್ನು ಸಲ್ಲಿಸುವುದು ತನ್ನ ಕರ್ತವ್ಯ" ಎಂದು ಅದು ತಿಳಿಸುತ್ತದೆ. ಆದರೆ ಅನಂತಕುಮಾರರು ಜುಲೈ 5, 2016 ರಂದು ಸಚಿವಾಲಯದ ಅಧಿಕಾರವನ್ನು ಸ್ವೀಕರಿಸುವಾಗ ಇನ್ನೂ ವಿಶಾಲವಾದ ಮುನ್ನೋಟವನ್ನು ತಮ್ಮ ಮುಂದಿರಿಸಿಕೊಂಡಿದ್ದರು.

"ಪ್ರಜಾಪ್ರಭುತ್ವದಲ್ಲಿ ಒಂದು ಆದರ್ಶ ಸಂಸತ್ತು ಎಂದರೆ, ಮಹಾ ಪಂಚಾಯತ್ತಿನ ಕಲ್ಪನೆಯಾಗಿದೆ. ಸಮಾಜದ ಜ್ಞಾನಿಗಳು ಹಾಗೂ ಗೌರವಾನ್ವಿತ ಪುರುಷ ಮತ್ತು ಮಹಿಳೆಯರು ಒಂದೆಡೆ ಸೇರಿ ಆಡಳಿತ ಮತ್ತು ಅದರ ಅನುಷ್ಠಾನಕ್ಕಾಗಿ ಚರ್ಚಿಸುತ್ತಾರೆ. ಇಲ್ಲಿ ಎಲ್ಲರೂ ಸಮಾನ ವೇದಿಕೆಯಲ್ಲಿರುತ್ತಾರೆ ಮತ್ತು ಎಲ್ಲರ ಅಭಿಪ್ರಾಯಗಳಿಗೂ ಇಲ್ಲಿ ಮನ್ನಣೆ ಇದೆ.

ಸಂಸದೀಯ ವ್ಯವಹಾರಗಳ ಸಚಿವಾಲಯವು, ಅನುಭವ ಮಂಟಪದಿಂದ ಸ್ಫೂರ್ತಿ ಪಡೆದಿದೆ. ಸಂಸದೀಯ ವ್ಯವಹಾರಗಳನ್ನು ಸುಲಲಿತವಾಗಿ ಮತ್ತು ಸಮರ್ಥವಾಗಿ ನಡೆಸಲು ಅನುವು ಮಾಡಿಕೊಡುವ ಉದ್ದೇಶವನ್ನು ಹೊಂದಿದೆ"

ಬಸವಣ್ಣನವರ ಕಾಲದ ಅನುಭವ ಮಂಟಪದ ಕಲ್ಪನೆಯನ್ನು ರಾಷ್ಟ್ರಮಟ್ಟಕ್ಕೆ ವಿಸ್ತರಿಸಿದ ಹಿರಿಮೆ ಅನಂತಕುಮಾರರದು. ಪಕ್ಷ, ಲಿಂಗ, ಪ್ರದೇಶ, ಜಾತಿ, ಮತ, ಧರ್ಮ, ಹಿನ್ನೆಲೆಗಳ ಭೇದವಿಲ್ಲದೆ ಎಲ್ಲ ಜನರನ್ನು ಸಮಾನವಾಗಿ ಗೌರವಿಸಬೇಕೆಂಬ ಅನಂತಕುಮಾರರ ವೈಯಕ್ತಿಕ ಜೀವನದ ಸೂತ್ರವನ್ನು ಅವರು ತಮ್ಮ ರಾಜಕೀಯ ಜೀವನದಲ್ಲಿಯೂ ಅಳವಡಿಸಿಕೊಂಡಿರುವುದರ ದ್ಯೋತಕವಿದು. ಈ ದೃಷ್ಟಿಕೋನವು ಅವರ ಸಾರ್ವಜನಿಕ ಜೀವನದ ಯಶಸ್ಸಿಗೂ ಕಾರಣವಾಯಿತು. ಜುಲೈ 5, 2016 ರಿಂದ ಅವರು ನಿಧನರಾಗುವವರೆಗೆ ಅಂದರೆ ದಿನಾಂಕ ನವೆಂಬರ್12, 2018 ರ ವರೆಗೆ ಸಂಸದೀಯ ವ್ಯವಹಾರಗಳ ಸಚಿವಾಲಯದಲ್ಲಿನ ಅವರ ಕಾರ್ಯಕಾಲವು ಅತ್ಯಂತ ಫಲಪ್ರದ ಕಾಲವೆನ್ನಿಸಿದೆ.

### ಅಸಾಧ್ಯವನ್ನು ಸಾಧ್ಯವಾಗಿಸಿದ ಬಗೆ

ಉತ್ತಮ ಹಣಕಾಸು ವ್ಯವಸ್ಥೆಯು ದೇಶದ ಪ್ರಗತಿಯ ಬೆನ್ನೆಲುಬು. ದೇಶದ ಕರಪದ್ಧತಿ ಮತ್ತು ಅದರ ಅನುಪಾಲನೆಯು ಹಣಕಾಸು ವ್ಯವಸ್ಥೆಯ ಸ್ಥಿತಿಗತಿಗಳನ್ನು ಸೂಚಿಸುತ್ತದೆ. ಕೇವಲ ಐದಾರು ವರ್ಷಗಳ ಹಿಂದೆ ದೇಶದಲ್ಲಿ ಇಪ್ಪತ್ತಕ್ಕೂ ಹೆಚ್ಚು ತೆರಿಗೆ ಕಾನೂನುಗಳಿದ್ದವು. ರಾಜ್ಯಗಳಿಗೆ ಸೀಮಿತವಾದ ಅನೇಕ ಪ್ರಾದೇಶಿಕ ಕಾನೂನುಗಳೂ ಜಾರಿಯಲ್ಲಿದ್ದವು. ಪ್ರತಿಯೊಂದು ರಾಜ್ಯವೂ ಒಂದೊಂದು ಪ್ರತ್ಯೇಕ ಮಾರುಕಟ್ಟೆಯಾಗಿದ್ದು ರಾಜ್ಯಗಳ ನಡುವೆ ಸರಕು ಸಾಗಣೆಯ ನಿರ್ಬಂಧಗಳಿದ್ದವು. ಈ ನಿರ್ಬಂಧಗಳನ್ನು ನಿವಾರಿಸಿಕೊಂಡು ಸರಕು ಸಾಗಾಣಿಕೆ ಮಾಡುವಾಗ ಉಂಟಾಗುವ ವಿಳಂಬದಿಂದಾಗಿ ಸಾಗಣೆ ವೆಚ್ಚ ಮತ್ತು ವ್ಯವಸ್ಥಾಪನಾ ವೆಚ್ಚವೂ ಹೆಚ್ಚಾಗುತ್ತಿತ್ತು. ಸರಕಾರಗಳಿಗೂ ಇದೊಂದು ಜಟಿಲವಾದ ಸಮಸ್ಯೆಯಾಗಿತ್ತು. ಇದರಿಂದಾಗಿ ಭಾರತದಲ್ಲಿ ವ್ಯವಹಾರ ಮಾಡುವುದು ಭಾರತೀಯರಿಗೂ ವಿದೇಶೀ ಕಂಪೆನಿಗಳಿಗೂ ಬಹಳ ಗೊಂದಲದ ವಿಷಯವಾಗಿತ್ತು.

ಇಂತಹ ಹಿನ್ನೆಲೆಯಲ್ಲಿ ಇಡೀ ದೇಶಕ್ಕೆ ಒಂದು ಏಕ ರೂಪದ ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂಬ ಚಿಂತನೆಯು ಕಾನೂನು ನಿರ್ಮಾತೃಗಳ ವಲಯದಲ್ಲಿ ಹಲವಾರು ದಶಕಗಳಿಂದ ನಡೆಯುತ್ತಿತ್ತು. ಇದು ಜಾರಿಗೆ ಬರಲು ಸಂವಿಧಾನದಲ್ಲಿ ತಿದ್ದುಪಡಿಗಳನ್ನು ಮಾಡಬೇಕಿತ್ತು. ಹಲವಾರು ವರ್ಷಗಳ ನೆನೆಗುದಿಯ ನಂತರ, ಮನಮೋಹನ ಸಿಂಗ್ ಸರಕಾರವು ಫೆಬ್ರವರಿ 28, 2006 ರಂದು ಬಜೆಟ್ ಮಂಡನೆಯ ಸಂದರ್ಭದಲ್ಲಿ ದೇಶದಾದ್ಯಂತ ಏಕರೂಪ ಸರಕು ಮತ್ತು ಸೇವಾ ತೆರಿಗೆ ನಿಯಮಗಳನ್ನು ಏಪ್ರಿಲ್1, 2010 ರಿಂದ ಜಾರಿಗೆ ತರುವುದಾಗಿ ಘೋಷಣೆ ಮಾಡಿತು. ಆದರೆ ಈ ಘೋಷಣೆ ಮುಂದಿನ ಹಲವಾರು ವರ್ಷಗಳ ವರೆಗೆ ಘೋಷಣೆಯಾಗಿಯೇ ಉಳಿಯಿತು. 2014 ರಲ್ಲಿ ನರೇಂದ್ರ ಮೋದಿಯವರ ಸರಕಾರ ರಚನೆಯಾದಾಗ ಈ ವಿಷಯ ಚಾಲನೆ ಪಡೆದುಕೊಂಡು 2016 ರ ಹೊತ್ತಿಗೆ ಒಂದು ರೂಪುರೇಷೆ ಸಿದ್ಧವಾಯಿತು.

ಸಂವಿಧಾನ ತಿದ್ದುಪಡಿಯಂತಹ ಮಹತ್ವದ ವಿಷಯಕ್ಕೆ ಸಂಸತ್ತಿನ ಸಮ್ಮತಿ ಪಡೆಯಲು ಉಭಯ ಸದನಗಳ ಮೂರನೇ ಎರಡರಷ್ಟು ಸದಸ್ಯರ ಬೆಂಬಲ ಗಳಿಸಿಕೊಳ್ಳಬೇಕು. ಅಂದಿನ ರಾಜಕೀಯ ಪರಿಸ್ಥಿತಿಯನ್ನು ಅವಲೋಕಿಸಿದವರಿಗೆ ಇದು ಎಷ್ಟು ಕಠಿಣ ಸವಾಲು ಎಂದು ತಿಳಿಯುತ್ತದೆ. ಸರಕಾರವು 336 ಸದಸ್ಯರ ಬೆಂಬಲದಿಂದ ರಚಿತವಾಗಿದ್ದರೂ ಮೂರನೇ ಎರಡರಷ್ಟು ಬಹುಮತವಿರಲಿಲ್ಲ, ರಾಜ್ಯಸಭೆಯಲ್ಲಂತೂ ಬಹುಮತವೇ ಇರಲಿಲ್ಲ. ಹೀಗಿದ್ದೂ ಈ ತಿದ್ದುಪಡಿ ಮಸೂದೆಯು ಎರಡೂ ಸದನಗಳಲ್ಲಿ ಸರ್ವಾನುಮತದಿಂದ ಅಂಗೀಕಾರವಾಯಿತು. ಇದಕ್ಕೆ ಅನಂತಕುಮಾರರ ಚಾಣಾಕ್ಷತೆ, ಸಂಪರ್ಕ ಕುಶಲತೆ ಮತ್ತು ಸ್ನೇಹಪರ ನಡವಳಿಕೆಗಳೇ ಕಾರಣ. ಮಸೂದೆಯು ಅಂಗೀಕಾರವಾದ ಮೇಲೆ ಅದರ ಬಗ್ಗೆ ವಿಪಕ್ಷಗಳು ನಡೆಸುತ್ತಿರುವ ಅಪಪ್ರಚಾರಗಳನ್ನು ಗಮನಿಸಿದವರಿಗೆ ಅನಂತಕುಮಾರರ ಮುತ್ಸದ್ದಿತನದ ಅರಿವಾಗಬಹುದು.

ಸರಕು ಮತ್ತು ಸೇವಾ ತೆರಿಗೆ ಮಸೂದೆಯು ದೇಶದ ತೆರಿಗೆ ಆಡಳಿತದ ಸುಧಾರಣೆಯ ಒಂದು ಮಹತ್ವದ ಮೈಲಿಗಲ್ಲು. ಈ ಮಸೂದೆಯನ್ನು ಡಿಸೆಂಬರ್2014 ರಂದೇ ಲೋಕಸಭೆಯಲ್ಲಿ ಮಂಡಿಸಲಾಗಿದ್ದರೂ ಅದನ್ನು ಪರಿಶೀಲನೆಗಾಗಿ ಪರಿಶೀಲನಾ ಸಮಿತಿಗೆ ಮೇ 14, 2015 ರಂದು ಒಪ್ಪಿಸಲಾಯಿತು. ಈ ಸಮಿತಿಯು ಜುಲೈ 22, 2015 ರಂದು ತನ್ನ ವರದಿಯನ್ನು ನೀಡಿತು. ಜುಲೈ 5, 2016 ರಲ್ಲಿ ಅನಂತಕುಮಾರರು ಸಂಸದೀಯ ವ್ಯವಹಾರಗಳ ಖಾತೆಯ ಸಚಿವರಾಗಿ ಅಧಿಕಾರ ಸ್ವೀಕರಿಸಿದರು. ಮುಂದೆ ತ್ವರಿತಗತಿಯನ್ನು ಪಡೆದ ಮಸೂದೆಯು ಅಗಸ್ಟ್3, 2016 ರಂದು ರಾಜ್ಯಸಭೆಯಲ್ಲಿಯೂ ಅಗಸ್ಟ್8, 2016

ಪುಟ 2 ರಲ್ಲಿ ಮುಂದುವರೆದಿದೆ



ರಾಷ್ಟ್ರೀಯ ಶಿಕ್ಷಣ ನೀತಿ
ಪ್ರೊ. ಎಂ.ಕೆ. ಶ್ರೀಧರ್
ಪುಟ - 5

ಅನಾರೋಗ್ಯದ ಆರ್ಥಿಕ ಹೊರೆ ತಪ್ಪಿಸಿದ ಅನಂತಕುಮಾರ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಪುಟ - 7



ಜೆನೆರಿಕ್ ಔಷಧಗಳ ಮಹತ್ತ್ವ
ಡಾ. ಬಿ.ಎಸ್.ಗಂಗಾಧರ್
ಪುಟ - 7





ಆತ್ಮನಿರ್ಭರ ಭಾರತದ ಕನಸು ಕಂಡ ದತ್ತೋಪಂತ ಠೇಂಗಡಿ
ಪುಟ - 9
ವ್ಯಕ್ತಿ ವಿಶೇಷ ಮಾಲಿಕೆ

# ಸಂಸದೀಯ ವ್ಯವಹಾರಗಳ ಕುಶಲ ನಿರ್ವಹಣೆಗೊಂದು ಮಾದರಿ

ಪುಟ 1 ರಿಂದ ರಂದು ಲೋಕಸಭೆಯಲ್ಲಿಯೂ ಸಂವಿಧಾನಕ್ಕೆ 122 ನೆಯ ತಿದ್ದುಪಡಿ ಮಾಡುವ 101 ನೆಯ ತಿದ್ದುಪಡಿ ಮಸೂದೆಯಾಗಿ ಅಂಗೀಕಾರವಾಯಿತು. ದಶಕಗಳ ಕಾಲ ನೆನೆಗುದಿಗೆ ಬಿದ್ದಿದ್ದ ಒಂದು ಮಹತ್ವದ ಸುಧಾರಣೆಯು ಅನಂತಕುಮಾರರ ಕರ್ತೃತ್ವ ಶಕ್ತಿಯಿಂದಾಗಿ ಬೆಳಕು ಕಾಣುವಂತಾಯಿತು.



**2016ರ ಮುಂಗಾರು ಅಧಿವೇಶನ**

2016 ರ ಮುಂಗಾರು ಅಧಿವೇಶನವು ಸಂಸತ್ತಿನ ಇತಿಹಾಸದಲ್ಲಿಯೇ ಅತ್ಯಂತ ಫಲಪ್ರದ ಅಧಿವೇಶನಗಳಲ್ಲೊಂದು ಎಂದು ಪರಿಗಣಿತವಾಗಿದೆ. ಈ ಅವಧಿಯಲ್ಲಿ ಸರಕು ಮತ್ತು ಸೇವಾ ತೆರಿಗೆ ಸಂವಿಧಾನ ತಿದ್ದುಪಡಿ ಮಸೂದೆಯ ಅಂಗೀಕಾರವಲ್ಲದೆ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಹಣದುಬ್ಬರ ಮುಂತಾದ ರಾಷ್ಟ್ರೀಯ ಮಹತ್ವದ ವಿಷಯಗಳ ಬಗ್ಗೆ ಉಪಯುಕ್ತ ಚರ್ಚೆಯೂ ನಡೆಯಿತು. ಈ ಅಧಿವೇಶನದಲ್ಲಿ ಅಂಗೀಕಾರವಾದ ಇತರ ಮಹತ್ವದ ಮಸೂದೆಗಳು:

- ಅರಣ್ಯೀಕರಣ ಪರಿಹಾರ ನಿಧಿ ಮಸೂದೆ 2016,
- ಭಾರತೀಯ ವೈದ್ಯಕೀಯ ಮಂಡಳಿ (ತಿದ್ದುಪಡಿ) ಮಸೂದೆ 2016,
- ದಂತವೈದ್ಯರು (ತಿದ್ದುಪಡಿ) ಮಸೂದೆ 2016,
- ಭಾರತೀಯ ನ್ಯಾಸಗಳ (ತಿದ್ದುಪಡಿ) ಮಸೂದೆ 2016,
- ತಾಂತ್ರಿಕ ಶಿಕ್ಷಣ ಸಂಸ್ಥೆಗಳು (ತಿದ್ದುಪಡಿ) ಮಸೂದೆ 2016,
- ತಾಂತ್ರಿಕ, ವಿಜ್ಞಾನ ಶಿಕ್ಷಣ ಮತ್ತು ಸಂಶೋಧನೆಯ ರಾಷ್ಟ್ರೀಯ ಸಂಸ್ಥೆ (ತಿದ್ದುಪಡಿ) ಮಸೂದೆ 2016,
- ಜೈವಿಕ ತಂತ್ರಜ್ಞಾನಕ್ಕಾಗಿ ಪ್ರಾದೇಶಿಕ ಕೇಂದ್ರ ಮಸೂದೆ 2016,
- ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ತಿದ್ದುಪಡಿ ಮಸೂದೆ 2016,
- ಲೋಕಪಾಲ ಮತ್ತು ಲೋಕಾಯುಕ್ತ (ತಿದ್ದುಪಡಿ) ಮಸೂದೆ 2016,
- ಬೇನಾಮಿ ವಹಿವಾಟು (ನಿಷೇಧ) ತಿದ್ದುಪಡಿ ಮಸೂದೆ 2016,
- ಹಣಕಾಸು ವಲಯಕ್ಕೆ ಸಂಬಂಧಿಸಿದ ಸರ್ಫೇಸೀ, ಆರ್ಡಿಡಿಬಿಎಫ್ಐ ಮುಂತಾದ ನಾಲ್ಕು ಅಧಿನಿಯಮಗಳಿಗೆ ತಿದ್ದುಪಡಿ ಮಾಡುವ "ದ ಎನ್ಫೋರ್ಸ್ ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಮತ್ತು ರಿಕವರಿ ಅಪ್ಡೇಟ್ ಲಾಸ್"
- ಅಂಡ್ ಮಿಸಲೇನಿಯಸ್ ಪ್ರಾವಿಶನ್ಸ್(ತಿದ್ದುಪಡಿ) ಮಸೂದೆ 2016
- ದ ಟ್ಯಾಕ್ಸೇಶನ್ ಲಾಸ್ (ತಿದ್ದುಪಡಿ) ಮಸೂದೆ 2016

ಈ ಅಧಿವೇಶನದಲ್ಲಿ ಲೋಕಸಭೆಯು ಶೇ 101 ರಷ್ಟು ಕಾರ್ಯಕ್ಷಮತೆ ತೋರಿಸಿದ್ದರೆ ರಾಜ್ಯಸಭೆಯು ಶೇ 96 ರಷ್ಟು ಕಾರ್ಯಕ್ಷಮತೆ ತೋರಿಸಿತ್ತು. ಸಂಸತ್ತಿನ ಈ ಕಾರ್ಯವೈಖರಿಯು ರಾಜ್ಯಗಳ ವಿಧಾನ ಮಂಡಲಗಳು, ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮಪಂಚಾಯತಿಗಳಿಗೆ ಮಾದರಿಯಾಗಿದೆ.





**ಅನುಭವ ಮಂಟಪ**

ಕ್ರಿಸ್ತಶಕ 12 ನೆಯ ಶತಮಾನದಲ್ಲಿ ಭಕ್ತಿಭಂಡಾರಿ ಬಸವಣ್ಣನವರು ಸಮಾಜದ ಪ್ರತಿಯೊಂದು ವರ್ಗವನ್ನೂ ಸಮಾನ ನೆಲೆಯಲ್ಲಿ ಒಂದೇ ವೇದಿಕೆಗೆ ಕರೆತಂದು ವಿಚಾರ ವಿನಿಮಯ ಮಾಡುವ ಸಂಸ್ಥೆಯನ್ನಾಗಿ ಅನುಭವ ಮಂಟಪವನ್ನು ಸ್ಥಾಪಿಸಿದ್ದರು. ಇದರ ಮೊದಲನೆಯ ಅಧ್ಯಕ್ಷರಾಗಿದ್ದವರು, ಅಲ್ಲಮಪ್ರಭು. ಇಂತಹ ಚಾರಿತ್ರಿಕ ಘಟನೆಯ ಅಭಿಮಾನಿಯಾಗಿದ್ದ ಅನಂತಕುಮಾರರು ಸಂಸತ್ತನ್ನು ಸೋಲು ಗೆಲುವುಗಳನ್ನು ನಿರ್ಣಯಿಸುವ ಅಂಕಣ ಎಂದು ಪರಿಗಣಿಸಿರಲಿಲ್ಲ. ಬದಲಾಗಿ ಪಂಡಿತ ಪಾಮರರೆಲ್ಲರೂ ಕಲೆತು ತಮ್ಮ ಅನುಭವಗಳ ಹಿನ್ನೆಲೆಯಲ್ಲಿ ವ್ಯಾಪಕ ಚರ್ಚೆ ನಡೆಸಿ ರಾಷ್ಟ್ರಹಿತದ ನಿರ್ಣಯಗಳನ್ನು ತೆಗೆದುಕೊಳ್ಳುವ ಅನುಭವ ಮಂಟಪವಾಗಬೇಕೆಂದು ಭಾವಿಸಿದ್ದರು.

**ತಂತ್ರಗಾರಿಕೆ**

ರಾಜಕೀಯ ವಿರೋಧಿಗಳು ಮತ್ತು ಸೈದ್ಧಾಂತಿಕ ವಿರೋಧಿಗಳ ನಡುವೆ ಯಶಸ್ಸು ಸಾಧಿಸಲು ಕೇವಲ ಸಂಪರ್ಕ ಮತ್ತು ಸ್ನೇಹಗಳಿದ್ದರೆ ಸಾಲದು, ರಾಜಕೀಯ ತಂತ್ರಗಾರಿಕೆಯೂ ಬೇಕಾಗುತ್ತದೆ. ಸಂಸದೀಯ ವ್ಯವಹಾರಗಳ ಸಚಿವರು ಮೈಯೆಲ್ಲ ಕಣ್ಣಾಗಿರಬೇಕಾಗುತ್ತದೆ. ಅವರಿಗೆ ಸಂಸತ್ತಿನಲ್ಲಿ ಸದಸ್ಯರ ಸಾಮಾನ್ಯ ನಡವಳಿಕೆಗಳ ಪರಿಚಯವಿರಬೇಕಾಗುತ್ತದೆ. ತಮ್ಮ ಪಕ್ಷದ ಸದಸ್ಯರ ಮೇಲೆ ಹಿಡಿತವನ್ನು ಹೊಂದಿರಬೇಕಾಗುತ್ತದೆ. ಜೊತೆಗೆ ವಿರೋಧಿಗಳ ಪ್ರತಿಯೊಂದು ಚಲನವಲನವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿರಬೇಕಾಗುತ್ತದೆ. ಇವೆಲ್ಲಕ್ಕಿಂತ ಹೆಚ್ಚಾಗಿ ಉಜ್ವಲ ರಾಷ್ಟ್ರಭಕ್ತಿ ಪ್ರೇರಿತರಾಗಿ ಮತ್ತು ಸ್ವಂತ ಹಿತದ ತ್ಯಾಗಕ್ಕೂ ಸಿದ್ಧರಾಗಿರಬೇಕಾಗುತ್ತದೆ.

ಇದಕ್ಕೊಂದು ಉತ್ತಮ ನಿದರ್ಶನ "ಶತ್ರು ಸಂಪತ್ತು ಅಧಿನಿಯಮ, 2016". ಸಮಕಾಲೀನ ಚರಿತ್ರೆಯ ಆಸಕ್ತರಿಗೆ ಮಹಮದಾಲಿ ಜಿನ್ನಾರವರ ವಾರಸುದಾರರು ಮುಂಬಯಿಯಲ್ಲಿದ್ದ "ಜಿನ್ನಾ ಹೌಸ್" ಮೇಲೆ ತಮ್ಮ ಹಕ್ಕನ್ನು ಪ್ರತಿಪಾದಿಸಿದ ವಿಷಯ ತಿಳಿದಿರಬಹುದು. ಅದೇ ರೀತಿ, ಭಾರತದಿಂದ ಪಾಕಿಸ್ತಾನ ಮತ್ತು ಚೀನಾ ದೇಶಗಳಿಗೆ ಯುದ್ಧಾನಂತರ ವಲಸೆ ಹೋದ ಅನೇಕರು ಆಯಾ ದೇಶಗಳ ಪೌರತ್ವವನ್ನು ಪಡೆದರೂ ಭಾರತದಲ್ಲಿದ್ದ ತಮ್ಮ ಆಸ್ತಿಯ ಮೇಲೆ ಹಕ್ಕುಗಳನ್ನು ಸ್ಥಾಪಿಸಲು ಪ್ರಯತ್ನಿಸಿದ್ದರು. ಇಂತಹ ಆಸ್ತಿಯ ಮೌಲ್ಯ ಒಂದು ಲಕ್ಷ ಕೋಟಿ ರೂಪಾಯಿಗಳಿಗೂ ಅಧಿಕ ಎಂದು ಅಂದಾಜಿಸಲಾಗಿತ್ತು. ಈ ಆಸ್ತಿಗಳಲ್ಲಿ ಅದಾಗಲೇ ಇತರರು ವಾಸ ಮಾಡಲು ತೊಡಗಿದ್ದರು. ಇವರ ಹಿತಾಸಕ್ತಿಗಳ ರಕ್ಷಣೆಗಾಗಿ ಮತ್ತು ದೇಶದ ಆಸ್ತಿಯು ವೈರಿ ರಾಷ್ಟ್ರಗಳ ನಾಗರಿಕರ ಪಾಲಾಗುವುದನ್ನು ತಪ್ಪಿಸಲು ಕೇಂದ್ರ ಸರಕಾರವು ವಿಧೇಯಕವೊಂದನ್ನು ಸಂಸತ್ತಿನ ಉಭಯ ಸದನಗಳಲ್ಲಿ ಮಂಡಿಸಿತು. ಯಥಾಪ್ರಕಾರ, ಕಾಂಗ್ರೆಸ್, ಕಮ್ಯೂನಿಸ್ಟ್ ಮತ್ತಿತರ ಪಕ್ಷಗಳು ಈ ವಿಧೇಯಕಕ್ಕೆ ವಿರೋಧವಾಗಿದ್ದವು. ಬಿಜೆಡಿ ಮತ್ತು ಇತರ ಕೆಲವು ಪಕ್ಷಗಳು ವಿಧೇಯಕವನ್ನು ಪರಿಶೀಲನಾ ಸಮಿತಿಯ ಪರಾಮರ್ಶೆಗೆ ಕಳಿಸುವಂತೆ ಒತ್ತಾಯಿಸುತ್ತಿದ್ದವು. ಆದರೆ ಈ ದಿಸೆಯಲ್ಲಿ ಕೊಂಚ ವಿಳಂಬವಾದರೂ 1968ರ ಶತ್ರು ಸಂಪತ್ತು ಕಾನೂನಿನಂತೆ ದೇಶಬಿಟ್ಟು ಹೋದವರ ವಾರಸುದಾರರಿಗೆ ಹಕ್ಕು ಸ್ಥಾಪಿಸಲು ಅನುವಾಗುತ್ತಿತ್ತು.

ಲೋಕಸಭೆಯಲ್ಲಿ ಈ ಅಧಿನಿಯಮ ಅಂಗೀಕಾರವಾಗುವುದರಲ್ಲಿ ಯಾವುದೇ ಸಂಶಯವಿರಲಿಲ್ಲ. ಆದರೆ ರಾಜ್ಯಸಭೆ ಇದನ್ನು ತಿರಸ್ಕರಿಸುವ ಎಲ್ಲ ಲಕ್ಷಣಗಳಿದ್ದವು. ಇದನ್ನು ಮನಗಂಡ ಅನಂತಕುಮಾರರು ತಂತ್ರವೊಂದನ್ನು ಹೆಣೆದರು. ಮಾರ್ಚ್10, 2017ರಂದು ಶುಕ್ರವಾರ. ಎಲ್ಲ ಸಂಸತ್ಸದಸ್ಯರೂ ತಮ್ಮ ತಮ್ಮ ಕ್ಷೇತ್ರಗಳಿಗೆ ಮರಳುವ ತರಾತುರಿಯಲ್ಲಿರುವುದನ್ನು ಮನಗಂಡು ಅಂತಹ ಸದಸ್ಯರ ಅನುಪಸ್ಥಿತಿಯಲ್ಲಿ ವಿಧೇಯಕವನ್ನು ಚರ್ಚೆಗೆ ಕೈಗೆತ್ತಿಕೊಳ್ಳುವಂತೆ ಮಾಡಲು ಯಶಸ್ವಿಯಾದರು. ಮಿತ್ರಪಕ್ಷಗಳ ಎಲ್ಲ ಸದಸ್ಯರು ಅಂದಿನ ರಾಜ್ಯಸಭೆಯಲ್ಲಿ ಹಾಜರಿರುವಂತೆ ಮನವೊಲಿಸಿದರು. ಒಂದು ಹಂತದಲ್ಲಿ ವಿರೋಧ ಪಕ್ಷದ ಸದಸ್ಯರ ಸಂಖ್ಯೆ ಕಡಿಮೆಯಾಗಿರುವುದನ್ನು ಗಮನಿಸಿ ವಿಧೇಯಕವನ್ನು ಮತಕ್ಕೆ ಹಾಕಿಸಿದರು. ವಿಧೇಯಕವು ಧ್ವನಿಮತದಿಂದ ಅಂಗೀಕೃತವಾಯಿತು. ಈ ರೀತಿಯಾಗಿ ದೇಶದ ಲಕ್ಷಾಂತರ ಕೋಟಿ ರೂಪಾಯಿಗಳ ಆಸ್ತಿಯು ಪರಭಾರೆಯಾಗುವುದನ್ನು ತಪ್ಪಿಸಿದರು.

**ಕರ್ತವ್ಯ ಮೊದಲು**

ರಾಜ್ಯಸಭೆಯಲ್ಲಿ ಅನಂತಕುಮಾರರು ಇಷ್ಟೆಲ್ಲ ಕ್ರಿಯಾಶೀಲರಾಗಿರುವಾಗಲೇ ಬೆಂಗಳೂರಿನಲ್ಲಿ ಅವರ ತಾಯಿಯ ಶ್ರಾದ್ಧ ನಡೆಯುತ್ತಿತ್ತು. ತಮ್ಮ ಪ್ರೀತಿಯ ತಾಯಿಯ ಶ್ರಾದ್ಧವನ್ನು ಅವರು ಎಂದೂ ತಪ್ಪಿಸಿದವರಲ್ಲ. ಆದರೆ, "ರಾಷ್ಟ್ರ ಸರ್ವೋಪರಿ" ಎಂಬ ತತ್ತ್ವವನ್ನು ಅಚಲವಾಗಿ ಪಾಲಿಸಿಕೊಂಡು ಬಂದಿದ್ದ ಅನಂತಕುಮಾರರು ತಮ್ಮನಾದ ಶ್ರೀ ನಂದಕುಮಾರರಿಗೆ ಶ್ರಾದ್ಧದ ಹೊಣೆಯನ್ನು ವಹಿಸಿ ರಾಷ್ಟ್ರಹಿತಕ್ಕಾಗಿ ತಮ್ಮ ಸಮಯವನ್ನು ಮೀಸಲಾಗಿರಿಸಿದರು. ಮುಂದಿನ ಪೀಳಿಗೆಗೆ ಮಾದರಿಯನ್ನು ಹಾಕಿಕೊಟ್ಟರು.

ಪುಟ 8 ರಲ್ಲಿ ಮುಂದುವರೆದಿದೆ

# ಸಂಸ್ಕಾರವನ್ನು ಮೈಗೂಡಿಸಿಕೊಂಡು ಬೆಳೆದ ನಾಯಕ

ಶ್ರೀ ವಿ. ನಾಗರಾಜ
ಕ್ಷೇತ್ರೀಯ ಸಂಘಚಾಲಕರು, ರಾಷ್ಟ್ರೀಯ ಸ್ವಯಂಸೇವಕ ಸಂಘ

ನಾನು ಕಂಡಂತೆ



ಅನಂತಕುಮಾರ್

ಅನಂತಪಥ ಪತ್ರಿಕೆಯ ಪ್ರತಿಯೊಂದು ಸಂಚಿಕೆಯ ಪ್ರತಿ ಪುಟದ ಕೆಳಗಿರುವ ಪಟ್ಟಿಕೆಯಲ್ಲಿ ವ್ಯಕ್ತಿತ್ವ, ಕರ್ತೃತ್ವ, ನೇತೃತ್ವ ಎಂಬ ಮೂರು ಪದಗಳನ್ನು ಕಾಣಬಹುದು. ಯಾವುದೇ ವ್ಯಕ್ತಿಯು ಸಾಧನೆಯನ್ನು ಮಾಡಲು ಹಾಗೂ ಸಾರ್ಥಕ ಜೀವನವನ್ನು ನಡೆಸಲು ಈ ಮೂರು ಸಂಗತಿಗಳು ಕೂಡ ಅತ್ಯಂತ ಅವಶ್ಯಕ. ಆ ಕಾರಣದಿಂದಲೇ ರಾಷ್ಟ್ರೀಯ ಸ್ವಯಂಸೇವಕ ಸಂಘವು ಸಂಘದ ಶಾಖೆಗೆ ಬರುವವರೆಲ್ಲರೂ ಸಂಘವು ನೀಡುವ ಸಂಸ್ಕಾರಗಳ ಮೂಲಕ ಈ ಮೂರು ಗುಣಗಳ ಜೊತೆಗೆ ವಿವೇಕ ಮತ್ತು ಭಕ್ತಿ ಎಂಬ ಇನ್ನೆರಡು ಗುಣಗಳನ್ನು ಕಲಿಯಬೇಕು ಎಂದು ಬಯಸುತ್ತದೆ. ವ್ಯಕ್ತಿಗೊಂದು ವ್ಯಕ್ತಿತ್ವ ಇದ್ದೇ ಇರುತ್ತದೆ. ಪ್ರತಿ ವ್ಯಕ್ತಿಗೂ ತನ್ನದೇ ಆದ ವಿಶೇಷ ಗುಣಗಳಿರುತ್ತವೆ. ಗಣಿಯಿಂದ ವಜ್ರವನ್ನು ಅಗೆದು ತೆಗೆಯುತ್ತಾರೆ. ಆ ವಜ್ರದ ಶ್ರೇಷ್ಠತೆ ತಿಳಿಯಬೇಕಾದರೆ ವಜ್ರವನ್ನು ಸಾಣೆ ಹಿಡಿಯಬೇಕಾಗುತ್ತದೆ. ಬಂಗಾರಕ್ಕೂ ಕೂಡ ಪುಟವಿಟ್ಟಾಗಲೇ ಬೆಲೆ ಬರುತ್ತದೆ. ಅದೇ ರೀತಿ ನಮ್ಮ ವ್ಯಕ್ತಿತ್ವಕ್ಕೆ ಬೇಕಾದ ಪ್ರತಿಭೆ, ಕುಶಲತೆ ಎಲ್ಲವೂ ಇರುತ್ತವೆ. ನಮ್ಮ ವ್ಯಕ್ತಿತ್ವದಲ್ಲಿ ಇರುವ ಎಲ್ಲ ಗುಣಗಳಿಗೂ ಸಂಸ್ಕಾರದ ಸಾಣೆ ಹಿಡಿದಾಗ ಪರಿಪೂರ್ಣ ವ್ಯಕ್ತಿತ್ವ ಬೆಳೆಯುತ್ತದೆ.

ವ್ಯಕ್ತಿತ್ವ ಉತ್ತಮವಾಗಬೇಕು ಎನ್ನುವುದು ಸಂಘದ ಸಂಕಲ್ಪ. ಹಾಗಾಗಿ, ಸಂಘದ ಶಾಖೆಗಳಲ್ಲಿ ಅಥವಾ ಸಂಘದ ಪರಿವಾರದ ಸಂಘಟನೆಗಳಲ್ಲಿ ಉತ್ತಮ ವ್ಯಕ್ತಿಯನ್ನು ರೂಪಿಸುವ ಸಂಸ್ಕಾರವನ್ನು ನೀಡಲಾಗುತ್ತದೆ. ಆದರೆ ಈ ಸಂಸ್ಕಾರವನ್ನು ತನ್ನಲ್ಲಿ ರೂಢಿಸಿಕೊಂಡು ಉತ್ತಮ ವ್ಯಕ್ತಿಯಾಗಿ ಬೆಳೆಯುವುದು ವ್ಯಕ್ತಿಯದೇ ಕರ್ತವ್ಯವಾಗಿರುತ್ತದೆ.

ವ್ಯಕ್ತಿತ್ವ ಬೆಳೆದರೆ ಸಾಲದು. ಅದರ ಜೊತೆಗೆ ಕರ್ತೃತ್ವವೂ ಬೇಕು. ಕೆಲಸ ಸಣ್ಣದಿರಲಿ, ದೊಡ್ಡದಿರಲಿ, ಅದನ್ನು ಯಶಸ್ವಿಯಾಗಿ ನಿರ್ವಹಿಸಲು ಉತ್ತಮ ಕರ್ತೃತ್ವಶಕ್ತಿ ಬೇಕು. ಈ ಸಂಘ ಮತ್ತು ಪರಿವಾರದ ಸಂಘಟನೆಗಳಲ್ಲಿ ಕರ್ತೃತ್ವಶಕ್ತಿಯನ್ನು ಬೆಳೆಸುವ ತರಬೇತಿ ಮತ್ತು ಪ್ರಶಿಕ್ಷಣಗಳನ್ನು ನೀಡಲಾಗುತ್ತದೆ. ನಮ್ಮ ಪಾತ್ರೆಯ ಅಳತೆಯಷ್ಟೇ ನೀರನ್ನು ನದಿಯಿಂದ ತೆಗೆದುಕೊಳ್ಳುವುದು ಸಾಧ್ಯವಾಗುವಂತೆ ಸಂಘವು ನೀಡುವ ಸಂಸ್ಕಾರವನ್ನು ನಾವು ಎಷ್ಟು ಅಳವಡಿಸಿಕೊಳ್ಳುತ್ತೇವೆಯೋ ಅಷ್ಟರ ಮಟ್ಟಿಗೆ ನಮ್ಮ ಕರ್ತೃತ್ವಶಕ್ತಿಯೂ ಬೆಳೆಯುತ್ತದೆ.

ವ್ಯಕ್ತಿತ್ವ ಮತ್ತು ಕರ್ತೃತ್ವಗಳ ಜೊತೆಗೆ ಇಂದು ನಮ್ಮ ದೇಶಕ್ಕೆ ಅತ್ಯಂತ ಅಗತ್ಯವಿರುವುದು ನೇತೃತ್ವ. ನಮ್ಮ ಸಮಾಜದಲ್ಲಿ, ನಮ್ಮ ರಾಷ್ಟ್ರದಲ್ಲಿ ಸ್ವಾತಂತ್ರ್ಯ ಬಂದ 67 ವರ್ಷಗಳಲ್ಲಿ ಸರಿಯಾದ ನೇತೃತ್ವ ಇಲ್ಲದಿದ್ದಾಗ ನಮ್ಮ ಪರಿಸ್ಥಿತಿ ಹೇಗಿತ್ತು, ಸರಿಯಾದ ನೇತೃತ್ವ ದೊರೆತಾಗ ಹೇಗೆ ಇಡೀ ಜಗತ್ತಿನಲ್ಲಿ ನಮ್ಮ ರಾಷ್ಟ್ರದ ಪ್ರತಿಭೆ ಗೋಚರವಾಗುತ್ತಿದೆ ಎಂಬುದನ್ನು ಗಮನಿಸಿ. ಹಾಗಾಗಿ, ನೇತೃತ್ವ ಬಹಳ ಪ್ರಮುಖವಾಗುತ್ತದೆ. ರಾಷ್ಟ್ರ ಅಥವಾ ಸಮಾಜದ ಮಟ್ಟದಲ್ಲಿ ಮಾತ್ರವಲ್ಲ, ಅತ್ಯಂತ ಸಾಮಾನ್ಯ ಸಂಗತಿಗಳನ್ನು ನಿರ್ವಹಿಸಲೂ ಕೂಡ, ಚಿಕ್ಕ ಪುಟ್ಟ ಸಂಘಟನೆಗಳನ್ನು, ಕೊನೆಗೆ ಮನೆಯನ್ನು ಕೂಡ ನಿರ್ವಹಿಸಲು ಕೂಡ ನೇತೃತ್ವ ಬೇಕಾಗುತ್ತದೆ. ಇದೇ ಕಾರಣದಿಂದ ವ್ಯಕ್ತಿಯು ಸಂಘದಲ್ಲಿ ನೇತೃತ್ವವನ್ನು ವಹಿಸಿಕೊಳ್ಳಬೇಕು ಎಂದು ಅಪೇಕ್ಷಿಸಲಾಗುತ್ತದೆ.

ಯಾವ ಕಾಲದಲ್ಲಿ ಏನು ಮಾಡಬೇಕು, ಏನು ಮಾಡಬಾರದು ಎಂದು ಯೋಚಿಸುವುದು ವಿವೇಕ. ಐದನೆಯ ಗುಣ, ಭಕ್ತಿ, ರಾಷ್ಟ್ರಭಕ್ತಿ, ಸಮಾಜದಲ್ಲಿ ಅಚಲವಾದ ನಿಷ್ಠೆ. ಸಂಘವು ಇದನ್ನು ಕಲಿಸುತ್ತದೆ. ಸಮಾಜಕ್ಕೆ ನಮ್ಮನ್ನು ಸಮರ್ಪಿಸಿಕೊಳ್ಳುವ ನಿತಾಂತವಾದ ನಿಷ್ಠೆ ನಮ್ಮಲ್ಲಿ ಬಂದಾಗ, ಜೀವನದಲ್ಲಿ ರಾಷ್ಟ್ರದ ಬಗ್ಗೆ, ಸಮಾಜದ ಬಗ್ಗೆ ಭಕ್ತಿ ನಿರ್ಮಾಣವಾದಾಗ ಮಿಕ್ಕ ನಾಲ್ಕು ಗುಣಗಳನ್ನು ಕೂಡ ಅತ್ಯಂತ ಉತ್ತಮವಾಗಿ ಅಳವಡಿಸಿಕೊಳ್ಳಲು ವ್ಯಕ್ತಿಯು ಪ್ರಯತ್ನ ಪಡುತ್ತಾನೆ. ತಾನು ಏನು ಪಡೆದುಕೊಂಡಿದ್ದಾನೋ ಅಷ್ಟನ್ನೂ ಸಮಾಜಕ್ಕೆ ಸಮರ್ಪಣೆ ಮಾಡಬೇಕು ಎಂಬ ಉದಾತ್ತ ಯೋಚನೆಯನ್ನೂ ಅವನು ಮಾಡುತ್ತಾನೆ. ಇವೆಲ್ಲವೂ ಒಬ್ಬ ವ್ಯಕ್ತಿಯನ್ನು ಪರಿಪೂರ್ಣ ವ್ಯಕ್ತಿಯನ್ನಾಗಿ ಮಾಡಲು ಬೇಕಾಗಿರುವ ಗುಣಗಳು.

ಹಾಗಾಗಿ, ವ್ಯಕ್ತಿತ್ವ, ಕರ್ತೃತ್ವ, ನೇತೃತ್ವ, ಭಕ್ತಿ, ವಿವೇಕ ಎಲ್ಲವೂ ಕೂಡ ಸಮಾಜ ಮತ್ತು ರಾಷ್ಟ್ರದ ಹಿತಕ್ಕೆ ಸಮರ್ಪಣೆಯಾಗುವುದನ್ನು ನಾವು ನೋಡುತ್ತೇವೆ. ಈ ರೀತಿ ಸ್ವಯಂಸೇವಕ ಸಂಘ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು ಮತ್ತು ಭಾರತೀಯ ಜನತಾ ಪಕ್ಷದಲ್ಲಿ ದೊರೆತ ಸಂಸ್ಕಾರಗಳೆಲ್ಲವನ್ನೂ ಮೈಗೂಡಿಸಿಕೊಂಡು ಎಲ್ಲ ಕ್ಷೇತ್ರಗಳಲ್ಲಿಯೂ ಅನಂತಕುಮಾರ್ ಅವರು ಬೆಳೆದರು. ಅವರು ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಸಂಘದ ಕಾರ್ಯಕರ್ತರಾಗಿದ್ದರು. ನಂತರ ಕಾಲೇಜು ದಿನಗಳಲ್ಲಿ ಅವರು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ನೇತೃತ್ವವನ್ನು ವಹಿಸಿಕೊಂಡರು.

ಆ ಎಲ್ಲ ಕಡೆಗಳಲ್ಲಿಯೂ ಅವರ ಕರ್ತೃತ್ವ ಮತ್ತು ನೇತೃತ್ವಗಳು ಪ್ರಕಟವಾಗುತ್ತ ಹೋಯಿತು. ಮುಂದೆ ಭಾರತೀಯ ಜನತಾ ಪಕ್ಷದಲ್ಲಿ ಅವರ ಸಾಧನೆಗಳನ್ನು ನಾವು ಅನಂತಪಥ ಪತ್ರಿಕೆಯ ಬೇರೆ ಬೇರೆ ಸಂಚಿಕೆಗಳಲ್ಲಿ ಓದಿದ್ದೇವೆ. ಅವರು ಇಡೀ ದೇಶದ ಮೆಚ್ಚುಗೆ ಗಳಿಸಿದ ರಾಜಕೀಯ ವ್ಯಕ್ತಿ ಎಂದು ಹೇಳಬಹುದು.


ಒಬ್ಬ ಮುತ್ಸದ್ದಿಯಂತೆ ಅವರು ತಮ್ಮ ಸಮಸ್ತವನ್ನು ರಾಷ್ಟ್ರಕಾರ್ಯಕ್ಕಾಗಿ ಸಮರ್ಪಣೆ ಮಾಡಿಕೊಂಡರು. ಮತ್ತು ಆಯಾ ಕಾಲದಲ್ಲಿ ಸಮಾಜಕ್ಕೆ ಏನು ಬೇಕೋ ಅದನ್ನು ಗುರುತಿಸಿ ನಿರ್ಣಯ ತೆಗೆದುಕೊಂಡು ಅದನ್ನು ಜಾರಿಗೆ ತರಲು ಬಹಳ ವಿಚಕ್ಷಣೆಯಿಂದ ಕೆಲಸ ಮಾಡಿದರು.

2014ನೇ ಇಸವಿಯಲ್ಲಿ ಮೋದಿ ಅವರ ಸರ್ಕಾರ ಬಂದ ನಾಲ್ಕೈದು ತಿಂಗಳ ನಂತರ ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಪರಿವಾರದ ಅಖಿಲ ಭಾರತೀಯ ಮಟ್ಟದ ಕಾರ್ಯಕರ್ತರನ್ನು, ಮತ್ತು ಕ್ಷೇತ್ರದ ಕಾರ್ಯಕರ್ತರನ್ನು ದೆಹಲಿಗೆ ಕರೆಸಿ ಒಂದು ಬೈಠಕ್ ನಡೆಸಲಾಗಿತ್ತು. ಅದರಲ್ಲಿ ನಾನೂ ಭಾಗವಹಿಸಿದ್ದೆ. ಸನ್ಮಾನ್ಯ ಮೋದಿಯವರು ಮಾತಾಡುತ್ತ ಪಕ್ಕದಲ್ಲಿ ಕುಳಿತಿದ್ದ ಅನಂತಕುಮಾರ್ ಅವರಿಗೆ "ನೀವು ಯೂರಿಯಾಕ್ಕೆ ಬೇವಿನ ಎಣ್ಣೆಯನ್ನು ಲೇಪಿಸಿರುವುದನ್ನು ಹೇಳಿದ್ದೀರಾ, ಇವರಿಗೆಲ್ಲ" ಎಂದು ಕೇಳಿದರು. ಅನಂತಕುಮಾರರು ಸುಮ್ಮನೆ ನಗುತ್ತ ಕುಳಿತಿದ್ದರು. ಆಗ ಮೋದಿಯವರೇ ಸ್ವತ: "ನಮ್ಮಅನಂತಕುಮಾರ್ ಮಾಡಿರುವ ಒಂದು ಅದ್ಭುತ ಸಂಗತಿಯನ್ನು ನಿಮಗೆ ಹೇಳುತ್ತೇನೆ" ಎನ್ನುತ್ತ ಯೂರಿಯಾಕ್ಕೆ ಬೇವಿನ ಎಣ್ಣೆಯನ್ನು ಯಾಕೆ ಲೇಪಿಸಬೇಕು, ಹಾಗೆ ಲೇಪಿಸಿದ್ದರಿಂದ ಆದ ಪರಿಣಾಮಗಳೇನು, ಅದಕ್ಕಾಗಿ ಅನಂತಕುಮಾರರು ಎಷ್ಟು ಅಧ್ಯಯನ ಮಾಡಿದರು, ವಿಜ್ಞಾನಿಗಳ ಜೊತೆಯಲ್ಲಿ ಅವರು ಮಾಡಿದ ಸಂವಾದ, ನಂತರ ಅವರು ಬೇವಿನ ಎಣ್ಣೆಯನ್ನು ತಯಾರು ಮಾಡುವ ಘಟಕಗಳು ಮತ್ತು ಯೂರಿಯಾ ಉತ್ಪಾದನೆ ಮಾಡುವ ಎಲ್ಲರಿಗೂ ನೀಡಿದ ಆದೇಶ ಮುಂತಾದವುಗಳನ್ನು ವಿವರಿಸಿದರು. ಅಷ್ಟೇ ಅಲ್ಲದೆ, ರೈತರಿಗೆ ಲಾಭವಾಗಬೇಕು ಎನ್ನುವ ಉದ್ದೇಶದಿಂದ ಪ್ರತಿಯೊಬ್ಬ ರೈತನೂ ತನ್ನ ಹೊಲದಲ್ಲಿ ಕನಿಷ್ಟ ಐದು ಗಿಡಗಳನ್ನು ನೆಡಬೇಕು ಎನ್ನುವ ಪರಿಕಲ್ಪನೆಯನ್ನು ಕೂಡ ಜಾರಿಗೆ ತಂದದ್ದನ್ನು ಸ್ವತ: ಪ್ರಧಾನ ಮಂತ್ರಿಗಳೇ ತಿಳಿಸಿದರು.

ಅನಂತಕುಮಾರರ ನೇತೃತ್ವ ಮತ್ತು ಕರ್ತೃತ್ವ ಎರಡೂ ಬಹಳ ದೊಡ್ಡದು. ಒಮ್ಮೆ ಬೆಂಗಳೂರಿನಲ್ಲಿ ಒಂದು ಲಕ್ಷ ವಿದ್ಯಾರ್ಥಿಗಳಿಂದ ಲಲಿತಾ ಸಹಸ್ರನಾಮದ ಪಠಣದ ದೊಡ್ಡ ಕಾರ್ಯಕ್ರಮ ನಡೆಯಿತು. ಆ ಪುಟ 4 ರಲ್ಲಿ ಮುಂದುವರೆದಿದೆ



ಅನಂತಪಥ ಮಾಸಪತ್ರಿಕೆಯ 14ನೇ ಸಂಚಿಕೆಯನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಮುಖಂಡರಲ್ಲೊಬ್ಬರಾದ ಶ್ರೀ ವಿ. ನಾಗರಾಜ್ ಅವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಅನಂತಪಥದ ವಿನ್ಯಾಸ, ಹೂರಣ ಎಲ್ಲವೂ ಸೊಗಸಾಗಿವೆಯೆಂದು ಪ್ರಶಂಸಿಸಿದರು. " ಕಳೆದ 2020 ಜುಲೈ ತಿಂಗಳಿನಿಂದ ನಿರಂತರವಾಗಿ ಈ ಪತ್ರಿಕೆ ಪ್ರತಿ ತಿಂಗಳೂ ಕ್ಲಪ್ತಕಾಲಕ್ಕೆ ಪ್ರಕಟವಾಗುತ್ತಿದೆ. ಇದರಲ್ಲಿ ಅಡಕವಾಗಿರುವ ಲೇಖನಗಳು ಅತ್ಯಂತ ವೈವಿಧ್ಯಮಯವಾಗಿವೆ. ಶ್ರೀ ಅನಂತಕುಮಾರ್ ಅವರ ಜೀವನದ ಘಟನೆಗಳು, ಅವರ ಸ್ಮರಣೀಯ ಸಾಧನೆಗಳು, ಜೊತೆಗೆ ಸಮಾಜ ಹಾಗೂ ರಾಷ್ಟ್ರಗಳ ಹಿತಕ್ಕೆ ಪೂರಕವಾಗಿರುವ ವಿಷಯಗಳ ಬಗ್ಗೆಯೂ ಅತ್ಯಂತ ಅಡಕವಾದ ಅಚ್ಚುಕಟ್ಟಾದ ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿವೆ. ಲೇಖನಗಳ ವಸ್ತು ಪತ್ರಿಕೆಯ ವಿನ್ಯಾಸ ಮತ್ತು ಮುದ್ರಣಗಳು ಆಕರ್ಷಕವಾಗಿವೆ. ಇದು ಶ್ಲಾಘನೀಯ" ಎಂದು ಮೆಚ್ಚುಗೆಯ ನುಡಿಗಳನ್ನಾಡಿದರು. ಈ ಸಂದರ್ಭದಲ್ಲಿ ಅನಂತಕುಮಾರ್ ಪ್ರತಿಷ್ಠಾನದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತು ಪತ್ರಿಕೆಯ ಸಂಪಾದಕರಾದ ಶ್ರೀ ಟಿ.ಎಸ್. ಗೋಪಾಲ್ ಉಪಸ್ಥಿತರಿದ್ದರು.





# ಸಂಸ್ಕಾರವನ್ನು ಮೈಗೂಡಿಸಿಕೊಂಡು ಬೆಳೆದ ನಾಯಕ

ಪುಟ 3 ರಿಂದ ಕಾರ್ಯಕ್ರಮಕ್ಕೆ ಮೋದಿಯವರನ್ನು ಕರೆಸಲು ಎಲ್ಲರೂ ಇಚ್ಛಿಸಿದ್ದರು. ಮೋದಿಯವರನ್ನು ಕರೆಸುವ ಜವಾಬ್ದಾರಿಯನ್ನು ಎಡತೊರೆ ಮಠದ ಮಹಾಸ್ವಾಮಿಗಳು ಅನಂತಕುಮಾರರಿಗೆ ವಹಿಸಿದ್ದರು. ಸಾಧಾರಣವಾಗಿ ಪ್ರಧಾನಮಂತ್ರಿಗಳು ಇಂತಹ ಒಂದು ಖಾಸಗಿ ಕಾರ್ಯಕ್ರಮಕ್ಕೆ ಬರುವುದಿಲ್ಲ. ರಾಜ್ಯಕ್ಕೆ ಸಂಬಂಧಪಟ್ಟ ಬೇರೆ ಯಾವುದಾದರೂ ಸರ್ಕಾರದ ಕಾರ್ಯಕ್ರಮವಿದ್ದರೆ ಆ ಕಾರ್ಯಕ್ರಮಕ್ಕೆ ಬಂದವರು ಅದರ ಜೊತೆಗೆ ಯಾವುದಾದರೂ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಾಧ್ಯತೆಯಿತ್ತು. ಅನಂತಕುಮಾರರಲ್ಲಿ ನೆನಪಿನ ಶಕ್ತಿ ಮತ್ತು ಕರ್ತೃತ್ವ ಶಕ್ತಿ ಅಪಾರವಾಗಿತ್ತು. ಧರ್ಮಸ್ಥಳದಲ್ಲಿ ರುಡ್‌ಸೆಟ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಜನರನ್ನು ಉದ್ದೇಶಿಸಿ ಮಾತನಾಡಬೇಕೆಂದು ಶ್ರೀ ವೀರೇಂದ್ರ ಹೆಗ್ಗಡೆಯವರು ಕೇಳಿಕೊಂಡಿರುವ ವಿಚಾರ ಅನಂತಕುಮಾರರ ನೆನಪಿನಲ್ಲಿತ್ತು. ಜೊತೆಗೆ ಬಿಜಾಪುರದಲ್ಲಿ ನವೀಕೃತ ರೈಲ್ವೇ ಸ್ಟೇಷನ್ ಉದ್ಘಾಟನೆಗೂ ಮೋದಿಯವರು ಬರಬೇಕೆಂದು ಆ ಭಾಗದ ಜನತೆ ಅಪೇಕ್ಷೆ ಪಟ್ಟಿದ್ದರು. ಇವೆಲ್ಲವನ್ನೂ ನೆನಪಿನಲ್ಲಿಟ್ಟುಕೊಂಡು ಕೇವಲ ಹತ್ತು ದಿನಗಳ ಅವಧಿಯಲ್ಲಿ ಪ್ರಧಾನ ಮಂತ್ರಿಯವರ ಅಧಿಕೃತ ಕಾರ್ಯಕ್ರಮವನ್ನು ರೂಪಿಸಿ ಇವುಗಳ ಜೊತೆಗೆ ಬೆಂಗಳೂರಿನ ಕಾರ್ಯಕ್ರಮಕ್ಕೂ ಮೋದಿಯವರು ಬರುವ ಹಾಗೆ ಮಾಡಿದರು.

ಅನಂತಕುಮಾರರು ಎರಡನೇ ಬಾರಿ ಲೋಕಸಭಾ ಸದಸ್ಯರಾಗಿ ಗೆದ್ದ ನಂತರ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿದ್ದರು. ಆಗ ಅಲ್ಲಿನ ಏರೋಸ್ಪೇಸ್ ವಿಭಾಗಕ್ಕೆ ಒಂದು ವಿಂಡ್ ಟನಲ್ ನಿರ್ಮಾಣವಾಗಬೇಕಿತ್ತು. ಮಂಡಳಿಯ ಸಭೆಯಲ್ಲಿ ಅದರ ಕುರಿತ ಚರ್ಚೆ ನಡೆಯುವುದಿತ್ತು. ಅನಂತಕುಮಾರರು ಸಭೆಗೆ ಎರಡು ದಿನ ಮೊದಲು ಏರೋ ಸ್ಪೇಸ್ ಇಂಜಿನಿಯರುಗಳ ಜೊತೆ ಚರ್ಚಿಸಿ ಅತ್ಯಂತ ಕ್ಲಿಷ್ಟಕರವಾದ ವಿಷಯಗಳ ಮಾಹಿತಿ ಪಡೆದುಕೊಂಡು ನಂತರ ಸಭೆಯಲ್ಲಿ ತಮ್ಮ ವಿಚಾರಗಳನ್ನು ಸಮರ್ಥವಾಗಿ ಮಂಡಿಸಿ ವಿಂಡ್ ಟನಲ್ ನಿರ್ಮಾಣಕ್ಕೆ ಬೇಕಾದ ಬೇಕಾದ ಅನುದಾನವನ್ನು ಪಡೆದುಕೊಳ್ಳಲು ಯಶಸ್ವಿಯಾದರು. ಹೀಗೆ ತಮ್ಮ ಕರ್ತೃತ್ವ ಮತ್ತು ನೇತೃತ್ವಗಳನ್ನು ಸಮಾಜ ಮತ್ತು ರಾಷ್ಟ್ರಕ್ಕಾಗಿ ಧಾರೆಯೆರೆದು ಕೆಲಸ ಮಾಡುತ್ತಿದ್ದರು.

ನಮ್ಮ ಕಾಲದಲ್ಲಿಯೇ ಬದುಕಿದ್ದ ಅನಂತಕುಮಾರರ ಬಗ್ಗೆ ಅನಂತಪಥ ಪತ್ರಿಕೆಯಲ್ಲಿ ಓದುವ ನಮಗೂ ಪ್ರೇರಣೆ ದೊರೆಯುತ್ತದೆ. ಈ ತಿಂಗಳಿನಿಂದ ಒಂದು ವರ್ಷದ ವರೆಗೆ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುತ್ತೇವೆ. ಸ್ವಾತಂತ್ರಕ್ಕಾಗಿ ಹೋರಾಟ ಮಾಡಿದ ಸತ್ಯಾಗ್ರಹಿಗಳು ಮತ್ತು ಕ್ರಾಂತಿಕಾರಿಗಳೆಲ್ಲರೂ ಈ ನಾಲ್ಕು ಗುಣಗಳನ್ನು ಬೆಳೆಸಿಕೊಂಡು ರಾಷ್ಟ್ರನಿಷ್ಠೆ ಎಂಬ ಭಕ್ತಿಯನ್ನು ತಮ್ಮ ಜೀವನದ ಭಾಗವನ್ನಾಗಿ ಮಾಡಿಕೊಂಡಿದ್ದರು. ಆ ಕಾರಣದಿಂದಾಗಿಯೇ ನಮಗೆ ಸ್ವಾತಂತ್ರ್ಯ ದೊರೆಯಿತು. ಇಂದು ನಾವು ಅವರೆಲ್ಲರನ್ನೂ ಸ್ಮರಿಸಿಕೊಳ್ಳುತ್ತಿದ್ದೇವೆ. ರಾಷ್ಟ್ರಭಕ್ತಿಯ ಜೊತೆಗೆ ಸೋದರತ್ವದ ಅಂಶವೂ ಈ ಎಲ್ಲ ಹೋರಾಟಗಾರರನ್ನು ಒಟ್ಟಿಗೆ ತಂದ ವಿಚಾರ. ನನ್ನ ತಾಯಿ ಭಾರತಿ, ಈ ಭೂಮಿಯಲ್ಲಿ ಹುಟ್ಟಿರುವ ಎಲ್ಲರೂ ನನ್ನ ಸೋದರ ಸೋದರಿಯರು. ಹಾಗಾಗಿ, ನಾನು ಇವರೆಲ್ಲರ ಬಗ್ಗೆಯೂ ಯೋಚಿಸುತ್ತೇನೆ. ನಾನು ಮಾಡುವ ಸೇವೆ ಇವರೆಲ್ಲರಿಗಾಗಿ ಎನ್ನುವ ಸೋದರತ್ವದ ಭಾವ ಮನಸ್ಸಿನಲ್ಲಿ ಅತ್ಯಂತ ಬಲವಾಗಿದ್ದುದರಿಂದ ಅವರು ಅತ್ಯಂತ ದೊಡ್ಡ ತ್ಯಾಗವನ್ನು ಮಾಡಲು ಸಿದ್ಧರಾದರು. ಅನೇಕರು ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದರು. ನಮ್ಮ ಸೋದರ ಸೋದರಿಯರ ರಕ್ಷಣೆ, ರಾಷ್ಟ್ರದ ರಕ್ಷಣೆ, ಸಮಾಜದ ರಕ್ಷಣೆ, ಸಮಾಜಸೇವೆ ಎಲ್ಲವೂ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿ ಇರಬೇಕಾಗಿರಬೇಕಾದ ಸಂಗತಿಗಳು. ಸ್ವಾಮಿ ವಿವೇಕಾನಂದರು ತಮ್ಮ ಎಲ್ಲ ಉಪನ್ಯಾಸಗಳಲ್ಲಿ ಕೂಡ ಈ ವಿಚಾರವನ್ನು ಜನರ ಮುಂಡಿಸುತ್ತಿದ್ದರು.

ಭಾರತವು ಪ್ರಬಲ ರಾಷ್ಟ್ರವಾಗಿ ಬೆಳೆಯುತ್ತಿರುವುದನ್ನು ಸಹಿಸದ ವ್ಯಕ್ತಿಗಳು ನಮ್ಮ ರಾಷ್ಟ್ರ, ಹಿಂದುತ್ವ ಮತ್ತು ಸಮಾಜಗಳನ್ನು ಹಾಳುಮಾಡುವ ಕೆಲಸವನ್ನು ಮಾಡುತ್ತಿದ್ದಾರೆ. ಸೆಪ್ಟೆಂಬರ್ 10 ರಿಂದ 12 ರ ವರೆಗೆ "Dismantling Global Hindutva" ಎಂಬ ವಿಷಯದ ಬಗ್ಗೆ ಅಮೆರಿಕದಲ್ಲಿ ನಡೆಯಲಿರುವ ಸಮ್ಮೇಳನದ ಬಗ್ಗೆ ನೀವು ಓದಿರಬಹುದು. ಭಾರತವನ್ನು ವಿರೋಧಿಸುತ್ತಲೇ ತಮ್ಮ ಜೀವಮಾನವನ್ನು ಕಳೆದಿರುವ ಜನರು ಈ ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾರೆ. ನಮ್ಮ ರಾಷ್ಟ್ರವನ್ನು, ಸಮಾಜವನ್ನು ನಾಶ ಮಾಡಲು ನಿರಂತರವಾಗಿ ಪ್ರಯತ್ನಿಸುತ್ತಿರುವ ಇಂಥವರ ಬಗ್ಗೆ ಜಾಗೃತಿ ಮೂಡಿಸಲು ಸಂಘ ಸಂಸ್ಥೆಗಳು ಮಾತ್ರವಲ್ಲ, ವೈಯಕ್ತಿಕವಾಗಿಯೂ ಕೆಲಸ ಮಾಡಬೇಕಾಗುತ್ತದೆ. ಇದು ನಮಗೆ ಸಂಬಂಧಿಸಿದ ವಿಚಾರವಲ್ಲ ಎಂದು ಉದಾಸೀನ ಮಾಡದೆ ನಮ್ಮಲ್ಲಿ ಪ್ರತಿಯೊಬ್ಬರ ಪ್ರಯತ್ನದಿಂದ ನಮ್ಮ ದೇಶ ಮತ್ತು ಸಮಾಜ ಪ್ರವರ್ಧಮಾನಕ್ಕೆ ಬರುತ್ತದೆ ಎಂದು ಕಾರ್ಯಪ್ರವೃತ್ತರಾಗಬೇಕು. ಈ ದಿಸೆಯಲ್ಲಿ ಅದಮ್ಯ ಚೇತನ ಮತ್ತು ಅನಂತಕುಮಾರ್ ಪ್ರತಿಷ್ಠಾನ ಮಾಡುತ್ತಿರುವ ಕೆಲಸಗಳು ಮಾದರಿಯಾಗಿವೆ. ಇಂತಹ ಸಂದರ್ಭಗಳಲ್ಲಿ ಅನಂತಕುಮಾರರು ಹೇಗೆ ನಡೆದುಕೊಳ್ಳುತ್ತಿದ್ದರು ಎಂಬುದನ್ನು ಅರಿತು ಅದರಂತೆ ನಡೆಯೋಣ.

ಜಗತ್ತಿನ ಪ್ರತಿಯೊಂದು ರಾಷ್ಟ್ರಕ್ಕೂ ಕೂಡ ಅದರದ್ದೇ ಆದ ಸ್ವಭಾವಗುಣ ಇರುತ್ತದೆ. ಈಗ ಜರ್ಮನಿ ದೇಶವು ಶಿಸ್ತಿಗೆ, ಬ್ರಿಟಿಷರು ಆಡಳಿತ ಕುಶಲತೆಗೆ ಹೆಸರಾದಂತೆ ಭಾರತೀಯರು ತ್ಯಾಗ ಮತ್ತು ಸಮರ್ಪಣೆಗಳಿಗೆ ಹೆಸರಾಗಿದ್ದಾರೆ. ಇವೆರಡನ್ನೂ ನಮ್ಮ ಯುವಕರು ಅಳವಡಿಸಿಕೊಂಡರೆ ಭಾರತಕ್ಕೆ ಸ್ವಾತಂತ್ರ್ಯವು ಬಂದೇ ಬರುತ್ತದೆ, ಭಾರತವು ಮತ್ತೊಮ್ಮೆ ಜಗಜ್ಜನನಿಯಾಗಿ ಪ್ರಕಾಶಿಸುತ್ತದೆ ಎಂದು ವಿವೇಕಾನಂದರು ಯಾವಾಗಲೂ ಹೇಳುತ್ತಿದ್ದರು. ತಾನು, ತನ್ನ ಕುಟುಂಬ ಎನ್ನುವ ಸ್ವಾರ್ಥದ ಪರಿಧಿಯಿಂದ ಹೊರಬಂದು ಇಡೀ ಸಮಾಜದ ಬಗ್ಗೆ, ರಾಷ್ಟ್ರದ ಬಗ್ಗೆ ಯೋಚನೆ ಮಾಡುವುದು ಅತ್ಯಂತ ಅವಶ್ಯಕ. ಅದು ಸಾಧ್ಯವಾಗಬೇಕಾದರೆ ಈ ಸೋದರಭಾವ ನಮ್ಮಲ್ಲಿ ಜಾಗೃತವಾಗಬೇಕು.

ನಾವು ಸ್ವಾತಂತ್ರವನ್ನು ಪಡೆದು 75 ವರ್ಷವಾಯಿತು. 75ನೇ ವರ್ಷದ ಆಚರಣೆಯ ಸಂದರ್ಭದಲ್ಲಿ ಭಾರತವು ಜಗತ್ತಿನಲ್ಲಿ ಅತ್ಯಂತ ಮುಂಚೂಣಿಯಲ್ಲಿ ಇರುವ ರಾಷ್ಟ್ರವಾಗಿ ಪರಿವರ್ತಿತವಾಗಿದೆ. ಕೇವಲ ಎರಡು ದಶಕಗಳ ಹಿಂದೆ ಜಗತ್ತು ಭಾರತವನ್ನು ಅತ್ಯಂತ ತುಚ್ಛವಾಗಿ ಕಾಣುತ್ತಿತ್ತು. ಇಂದು ಭಾರತವು ಜಗತ್ತಿನ ಅಗ್ರರಾಷ್ಟ್ರಗಳಲ್ಲಿ ಒಂದಾಗಿದೆ. ವೈಜ್ಞಾನಿಕ ಕ್ಷೇತ್ರದಲ್ಲಿಯೂ ಕೂಡ ಅಗ್ರಶ್ರೇಣಿಯ ಸಾಧನೆ ನಮ್ಮದು. ಇಂದು ಜಗತ್ತನ್ನು ಕಾಡುತ್ತಿರುವ ಮಹಾಮಾರಿ ಕರೋನಾ ಕಾಯಿಲೆಗೆ ಲಸಿಕೆಯನ್ನು ಕಂಡಿಹಿಡಿದಿರುವ ಕೆಲವೇ ದೇಶಗಳಲ್ಲಿ ನಮ್ಮದೂ ಒಂದು. 21ನೇ ಶತಮಾನದಲ್ಲಿ ಈ ಮಟ್ಟದ ಅಭಿವೃದ್ಧಿಯನ್ನು ಸಾಧಿಸಿರುವ ಸಂದರ್ಭದಲ್ಲಿಯೂ ಸಮಾಜದಲ್ಲಿ, ರಾಷ್ಟ್ರದಲ್ಲಿ ಒಡಕುಗಳನ್ನು ನಾವು ನೋಡುತ್ತಿದ್ದೇವೆ. ಜಾತಿಯ ಹೆಸರಿನಲ್ಲಿ, ಭಾಷೆಯ ಹೆಸರಿನಲ್ಲಿ ಪ್ರಾಂತ್ಯದ ಹೆಸರಿನಲ್ಲಿ ಕಚ್ಚಾಟಗಳು ನಡೆಯುತ್ತಿವೆ. ಅಸ್ಪೃಶ್ಯತೆಯಂತಹ ಹೇಯ ಆಚರಣೆಗಳು ಇಂದಿಗೂ ಜೀವಂತವಾಗಿರುವುದನ್ನು ನಾವು ನೋಡುತ್ತಿದ್ದೇವೆ. ಪತ್ರಿಕೆಗಳಲ್ಲಿ ಇಂತಹ ವಿಚಾರಗಳನ್ನು ಓದುವಾಗ ಮನಸ್ಸಿಗೆ ಖೇದವಾಗುತ್ತದೆ. ಸೋದರತ್ವದ ಭಾವ ಬೆಳೆದಾಗ ಮಾತ್ರ ಇದು ಬದಲಾವಣೆಯಾಗಲು ಸಾಧ್ಯ. ಸ್ವಾತಂತ್ರ್ಯದ 75 ನೆಯ ದಿನಾಚರಣೆಯ ಸಂದರ್ಭದಲ್ಲಿ ರಾಜ್ಯಗಳ ನಡುವೆ ಗಡಿ ವಿವಾದ, ನದಿ ನೀರಿನ ಹಂಚಿಕೆ ವಿವಾದ, ಜಾತಿ ಸಂಘರ್ಷಗಳು ಇರುವುದು ವಿಷಾದವನ್ನುಂಟು ಮಾಡುತ್ತದೆ. ಇವೆಲ್ಲವೂ ದೇಶದ ಅಭಿವೃದ್ಧಿಗೆ ಮಾರಕವಾದವುಗಳಾಗಿವೆ. ಇದು ಬದಲಾಗಲು ಸೋದರತ್ವದ ಭಾವ ಅಗತ್ಯ. ನಾನು ಎಂಬುದು ನಾವು ಎಂದು ಬದಲಾದಾಗ ಅಂತಹ ಬದಲಾವಣೆ ಉಂಟಾಗುತ್ತದೆ.

ಅದಮ್ಯಚೇತನ ಸಂಸ್ಥೆಯು ಅನೇಕ ಸಾಮಾಜಿಕ ವಿಷಯಗಳನ್ನು ತೆಗೆದುಕೊಂಡು ಜಾಗೃತಿಯನ್ನು ನಿರ್ಮಾಣ ಮಾಡುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ಇದಕ್ಕೆ ಮುಖ್ಯ ಕಾರಣ, ಇದೇ ರಾಷ್ಟ್ರಭಕ್ತಿ, ಸಮಾಜ ನಿಷ್ಠೆ ಮತ್ತು ಸೋದರತ್ವದ ಭಾವ. ಸಮಾಜದ ಹಿತಕ್ಕೆ ಪೂರಕವಾದ ಹತ್ತಾರು ಕಾರ್ಯಕ್ರಮಗಳನ್ನು ಈ ಸಂಸ್ಥೆ ಹಮ್ಮಿಕೊಂಡಿದೆ. ಇವೆಲ್ಲವೂ ಈ ಪತ್ರಿಕೆಯಲ್ಲಿ ವರದಿಯಾಗುತ್ತಿವೆ. ಸಂಸ್ಥೆಯು ಏರ್ಪಡಿಸುವ ಉಪನ್ಯಾಸಗಳೂ ಸಮಾಜದ ಹಿತವನ್ನೇ ಚಿಂತಿಸುತ್ತಿವೆ. ಈ ರೀತಿ ನಡೆಯುತ್ತಿರುವ ಜಾಗೃತಿ ಕೂಡ ಅಗತ್ಯ.

## 301ನೇ ಹಸಿರು ಭಾನುವಾರ

ಅನಂತಕುಮಾರ್ ಅವರು ಪ್ರಾರಂಭಿಸಿದ ಸಸ್ಯಾಗ್ರಹ ಯೋಜನೆಯಡಿಯಲ್ಲಿ, ಜನವರಿ 2016 ರಿಂದ ಒಂದು ಭಾನುವಾರವೂ ತಪ್ಪದೇ ನಿರಂತರವಾಗಿ ಪ್ರತಿ ವಾರ ಗಿಡ ನೆಡುವ ಕಾರ್ಯಕ್ರಮ ಮಾಡುತ್ತಾ ಬರಲಾಗಿದೆ.

ಮುಂಬರುವ 3 ನೇ ಅಕ್ಟೋಬರ್ 2021 ರಂದು ನಾವು 300 ನೇ ಭಾನುವಾರ ಸಂಪನ್ನಗೊಳಿಸಿ **301 ನೇ ಹಸಿರು ಭಾನುವಾರ** ವನ್ನು ಆಚರಿಸಲಾಗುವುದು.

ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ ಬಳಿಯಿರುವ ಭವಾನಿ ಮಾನೆ ಸರೋವರದ ಪಕ್ಕದಲ್ಲಿ ಆ ದಿನದಂದು 301 ಪ್ರಭೇದದ 1200 ಗಿಡಗಳನ್ನು ನೆಡುವ ಉದ್ದೇಶವಿದೆ.

ಗಿಡ, ಸಲಕರಣೆಗಳು, ಗೊಬ್ಬರ, ನೋಂದಾಯಿತ ಸದಸ್ಯರಿಗೆ ಪಾನೀಯ & ಉಪಹಾರ/ಊಟ ವ್ಯವಸ್ಥೆಯನ್ನು ಮಾಡಲಾಗುವುದು.

ಕೋವಿಡ್ ಕಾರಣದಿಂದ ಸೀಮಿತ ಜನರಿಗೆ ಅವಕಾಶ ಇದೆ. ತುರ್ತಾಗಿ ಹೆಸರು ನೋಂದಾಯಿಸಿ.

**ಸ್ಥಳ :** ಭವಾನಿ ಮಾನೆ ಸರೋವರ, ಅಮೃತನಗರ, ಕನ್ನಾಯಕನ ಅಗ್ರಹಾರ, ಬೆಂಗಳೂರು

**ದಿನಾಂಕ :** 03-10-2021

**ನೋಂದಾವಣೆ ಶುಲ್ಕ :** ರೂ.100 (ವಿದ್ಯಾರ್ಥಿಗಳಿಗೆ ರೂ.50)

**೩೦೦ನೇ ಹಸಿರು ಭಾನುವಾರದ ಸಲುವಾಗಿ ದೇಣಿಗೆ ಮತ್ತು ಪ್ರಾಯೋಜಕತ್ವ ನೀಡಬಹುದು.**

**REGISTER:**

https://www.adamyachetana.org/301-green-sunday/

# ರಾಷ್ಟ್ರೀಯ ಶಿಕ್ಷಣ ನೀತಿ

ನಾವೆಲ್ಲರೂ ಶಿಕ್ಷಣದ ಜೊತೆಗೆ ಒಂದಲ್ಲ ಒಂದು ರೀತಿಯಿಂದ ಸಂಬಂಧ ಹೊಂದಿದ್ದೇವೆ, ಚಿಂತನೆ ಮಾಡಿದ್ದೇವೆ. ವಿದ್ಯಾರ್ಥಿಗಳಾಗಿ ಅಥವ ಶಿಕ್ಷಕರಾಗಿ ಶಿಕ್ಷಣದ ಜೊತೆಗೆ ನೇರ ಸಂಬಂಧವನ್ನು ಹೊಂದಿದ್ದರೆ ಹಿರಿಯ ನಾಗರಿಕರಾಗಿ, ಉದ್ಯೋಗಸ್ಥರಾಗಿ ಮತ್ತು ಗೃಹಿಣಿಯರಾಗಿ ನಾವೆಲ್ಲ ಶಿಕ್ಷಣ ವ್ಯವಸ್ಥೆಯ ಬಗ್ಗೆ ಕಾಳಜಿ ಹೊಂದಿದ್ದೇವೆ. ಶಿಕ್ಷಣವು ನಮ್ಮ ಪರಿಸರಕ್ಕೆ, ನಮ್ಮ ಮಕ್ಕಳಿಗೆ, ನಮ್ಮ ದೇಶಕ್ಕೆ ಒಂದು ರೀತಿಯ ಪ್ರೇರಣೆಯನ್ನು ನೀಡುತ್ತದೆ. ಆದುದರಿಂದ ಸರಕಾರವು ಜಾರಿಗೆ ತಂದಿರುವ ಹೊಸ ಶಿಕ್ಷಣ ನೀತಿಯನ್ನು ಶಿಕ್ಷಣ ಕ್ಷೇತ್ರದ ಜನರಿಗೆ ಮಾತ್ರ ಸಂಬಂಧಿಸಿದ ವಿಷಯವೆಂದು ಭಾವಿಸದೆ ಶಿಕ್ಷಣದ ಬಗ್ಗೆ ಕಾಳಜಿಯನ್ನು ಹೊಂದಿರುವ ನಮಗೆಲ್ಲರಿಗೂ ಸಂಬಂಧಿಸಿದ ವಿಷಯ ಎಂದು ಗ್ರಹಿಸಬೇಕು.

ನಮ್ಮ ದೇಶದಲ್ಲಿ ಶಿಕ್ಷಣ ನೀತಿಯೊಂದನ್ನು ಜಾರಿಗೆ ತಂದದ್ದು ಸುಮಾರು ಮೂರೂವರೆ ದಶಕಗಳ ಹಿಂದೆ, 1986 ರಲ್ಲಿ. ಅದು ನಾಲ್ಕಾರು ವರ್ಷಗಳ ವರೆಗೆ ಚಾಲ್ತಿಯಲ್ಲಿತ್ತು. ನಂತರ ಮುಂದಿನ 34 ವರ್ಷಗಳ ವರೆಗೆ ನಮ್ಮ ದೇಶದಲ್ಲಿ ಒಂದು ರಾಷ್ಟ್ರೀಯ ಶಿಕ್ಷಣ ನೀತಿಯೇ ಇರಲಿಲ್ಲವೆಂದರೆ ಆಶ್ಚರ್ಯಕ್ಕಿಂತ ಹೆಚ್ಚಾಗಿ ವಿಷಾದವಾಗುತ್ತದೆ. ಇದ್ದದ್ದೇನಿದ್ದರೂ ಇಚ್ಛಾಶಕ್ತಿ ರಹಿತವಾದ, ಅರೆಬರೆಯಾದ, ಹಂಗಾಮಿ ನೀತಿ ಮಾತ್ರ. ಯಾವಾಗಲೂ ನೀತಿಯು ಚಿಂತನೆಗಳಿಗೊಂದು ನಿರ್ದೇಶನವನ್ನು ನೀಡುತ್ತದೆ. ಚಿಂತನೆಗಳಿಗೆ ಒಂದು ನಿರ್ದೇಶನ ದೊರೆತಾಗ ಆ ದಿಸೆಯಲ್ಲಿ ಕ್ರಿಯೆ ಪ್ರಾರಂಭವಾಗುತ್ತದೆ. ಚಿಂತನೆಗೆ ಯಾವ ನಿರ್ದೇಶನವೂ ಇಲ್ಲದಿದ್ದರೆ ಕ್ರಿಯೆಗೂ ಗೊತ್ತುಗುರಿಯಿರುವುದಿಲ್ಲ, ಅಂತಹ ಕ್ರಿಯೆಗಳಿಂದ ನಾವು ಬಯಸಿದ ಫಲಿತಾಂಶ ದೊರೆಯುವುದಿಲ್ಲ.

ಇವೆಲ್ಲವನ್ನೂ ಗಮನದಲ್ಲಿರಿಸಿಕೊಂಡು ನಮ್ಮ ಕೇಂದ್ರ ಸರಕಾರವು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯೊಂದನ್ನು ನಿರೂಪಿಸಿ 29/07/2020 ರಂದು ಪ್ರಕಟಿಸಿತು. ಯಾವುದೇ ಒಂದು ನೀತಿಯನ್ನು ನಿರೂಪಿಸುವಾಗ ಆಸಕ್ತರಿಂದ ಅಭಿಪ್ರಾಯಗಳು ಮತ್ತು ಸಲಹೆಗಳನ್ನು ಆಹ್ವಾನಿಸಲಾಗುತ್ತದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡು ತಯಾರಿಕೆಯ ಸಂದರ್ಭದಲ್ಲಿ ನಡೆಸಿದ ಅಭಿಪ್ರಾಯ ಸಂಗ್ರಹಣೆ ಮತ್ತು ಸಮಾಲೋಚನೆಗಳ ಗಾತ್ರವನ್ನು ಗಮನಿಸಿದರೆ ಜಗತ್ತಿನಲ್ಲಿಯೇ ಅತ್ಯಂತ ಬೃಹತ್ತಾದ ಕಾರ್ಯ ನಡೆದಿರುವುದು ತಿಳಿಯುತ್ತದೆ. ಇದು ಸಮಾಜದ ವಿವಿಧ ಸ್ತರಗಳ ಜನರ ಭಾಗವಹಿಸುವಿಕೆಯನ್ನೂ ಸೂಚಿಸುತ್ತದೆ. ಈ ಹೊಸ ನೀತಿಯನ್ನು ನಿರೂಪಿಸುವಲ್ಲಿ ಜನವರಿ 2015 ರಿಂದ 2019 ರವರೆಗೆ ಸಮಾಜದ ಪ್ರತಿಯೊಂದು ವರ್ಗವನ್ನೂ ಸಂಪರ್ಕಿಸಿ ಅಭಿಪ್ರಾಯ ಮತ್ತು ಸಲಹೆಗಳನ್ನು ಶಿಕ್ಷಣ ತಜ್ಞರು ಪಡೆದುಕೊಂಡಿದ್ದಾರೆ. ಹೀಗೆ ತಯಾರಿಸಿದ ಕರಡು ನೀತಿಯನ್ನು ಮೇ, 2019 ರಂದು ಸಾರ್ವಜನಿಕರ ಅವಗಾಹನೆ ಮತ್ತು ಸಲಹೆ ಸೂಚನೆಗಳಿಗಾಗಿ ಮುಕ್ತವಾಗಿರಿಸಲಾಯಿತು. ಮುಂದಿನ ಒಂದು ವರ್ಷದಲ್ಲಿ ಈ ಕರಡು ನೀತಿಗೆ ಅದ್ಭುತವಾದ ಪ್ರತಿಕ್ರಿಯೆ ವ್ಯಕ್ತವಾಗಿದ್ದು ಸುಮಾರು 2 ಲಕ್ಷಕ್ಕೂ ಹೆಚ್ಚು ಜನರು ಸ್ಪಂದಿಸಿದ್ದರು. ಈ ಎಲ್ಲ ಸಲಹೆಗಳನ್ನು ಗಮನದಲ್ಲಿರಿಸಿಕೊಂಡು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಂತಿಮಗೊಳಿಸಲಾಗಿದೆ.

ಒಂದು ಶಿಕ್ಷಣ ನೀತಿಯನ್ನು ಅಭಿವೃದ್ಧಿ ಪಡಿಸುವ ಪ್ರಕ್ರಿಯೆಯೇ ಮಹತ್ವದ್ದು. ಅದನ್ನು ಅಭಿವೃದ್ಧಿ ಪಡಿಸಿದ ನಂತರ ಸಂಬಂಧ ಪಟ್ಟವರಿಗೆ ಅದನ್ನು ತಲುಪಿಸುವುದೂ ಅಷ್ಟೇ ಮುಖ್ಯ. ಶಿಕ್ಷಣ ನೀತಿಯು ಯಶಸ್ವಿಯಾಗಲು ನಾಯಕತ್ವದ ಇಚ್ಛಾಶಕ್ತಿ, ಬದ್ಧತೆ ಮತ್ತು ಸಹಯೋಗ ಅತ್ಯಗತ್ಯ. ಪ್ರಧಾನ ಮಂತ್ರಿಗಳು, ಕೇಂದ್ರ ಮತ್ತು ರಾಜ್ಯ ಸರಕಾರಗಳು ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಿದ ಕಾರಣ ಈ ಹೊಸ ನೀತಿಯು ಇಂದು ಜಾರಿಗೆ ಬಂದಿದೆ.

ಶಿಕ್ಷಣ ಕ್ಷೇತ್ರದ ಎಲ್ಲ ಆಯಾಮಗಳನ್ನು ಒಳಗೊಳ್ಳುವಂತೆ ಈ ಶಿಕ್ಷಣ ನೀತಿಯನ್ನು ನಿರೂಪಿಸಲಾಗಿದೆ. ಈ ನೀತಿಯಲ್ಲಿ ಎಲ್ಲವೂ ಇವೆ, ಇದರಿಂದ ಹೊರತಾದುದು ಯಾವುದೂ ಇಲ್ಲ ಎಂದೇ ಹೇಳಬಹುದು.

ಮೊದಲನೆಯದಾಗಿ, ಶಾಲಾ ವಿದ್ಯಾಭ್ಯಾಸವನ್ನೇ ಗಮನಿಸಿ. ನಮ್ಮ ದೇಶದ ಬೇರೆ ಬೇರೆ ಪ್ರಾಂತಗಳಲ್ಲಿ ಮಕ್ಕಳ ಸಾಂಪ್ರದಾಯಿಕ ಶಿಕ್ಷಣವು ಐದರಿಂದ ಆರು ವರ್ಷಕ್ಕೆ ಪ್ರಾರಂಭವಾಗುತ್ತದೆ. ಆದರೆ ಇದಕ್ಕಿಂತ ಚಿಕ್ಕ ಮಕ್ಕಳ ಬಗ್ಗೆ ಕಾಳಜಿಯನ್ನು ವಹಿಸುವ ನಿಯಮವನ್ನು ಮೊತ್ತ ಮೊದಲ ಬಾರಿಗೆ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಮಗುವಿನ ಶಿಕ್ಷಣವು ಮೂರನೆಯ ವಯಸ್ಸಿನಿಂದ ಪ್ರಾರಂಭವಾಗಿ ಹದಿನೆಂಟು ವರ್ಷದ ವರೆಗಿನ 15 ವರ್ಷಗಳ ಕಾಲದಲ್ಲಿ ನಡೆಯುತ್ತದೆ. ಈ ಅವಧಿಯನ್ನು 5+3+3+4 ವರ್ಷಗಳ ಉಪ ಅವಧಿಗಳನ್ನಾಗಿ ವಿಭಾಗಿಸಲಾಗಿದೆ.

5+3+3+4 ಅವಧಿಯ ಶಿಕ್ಷಣ ನೀತಿಯನ್ನು ಪ್ರಾರಂಭಿಸಲು ಕಾರಣವಾದ ಹಿನ್ನೆಲೆಯನ್ನು ಗಮನಿಸಬೇಕು. ಹಿಂದೆ ವಾಜಪೇಯಿಯವರ ಸರಕಾರದಲ್ಲಿ ಶ್ರೀ ಮುರಳಿ ಮನೋಹರ ಜೋಶಿಯವರು ಮಾನವ ಸಂಪನ್ಮೂಲ ವಿಭಾಗದ ಮಂತ್ರಿಯಾಗಿದ್ದಾಗ ಸರ್ವ ಶಿಕ್ಷಾ ಅಭಿಯಾನವನ್ನು ಪ್ರಾರಂಭಿಸಿದರು. ಇದರಿಂದಾಗಿ ಶಿಕ್ಷಣದ ಸಾರ್ವತ್ರೀಕರಣವಾಗಿ ದೇಶದ ಶಾಲೆಗೆ ಹೋಗುವ ವಯೋಮಾನದ ಎಲ್ಲ ಮಕ್ಕಳನ್ನೂ ಶಾಲೆಗಳಲ್ಲಿ ದಾಖಲಿಸಲಾಗಿತ್ತು. ಪ್ರತಿ ಕಿಲೋಮೀಟರಿಗೆ ಒಂದರಂತೆ ಪ್ರಾಥಮಿಕ ಶಾಲೆಗಳ ಬೃಹತ್‌ಜಾಲವೂ ನಿರ್ಮಾಣವಾಯಿತು. ಹೀಗೆ ಹೊಸದಾಗಿ ದಾಖಲಾದ ಮಕ್ಕಳಿಗೆ ಸೂಕ್ತವಾದ ಶಿಕ್ಷಣವನ್ನು ನೀಡುವ ಹೊಣೆ ಸರಕಾರದ ಮೇಲಿತ್ತು. ಪ್ರಾದೇಶಿಕ ವ್ಯತ್ಯಾಸಗಳು ಮತ್ತು ವಯೋಮಾನದ ಹಿನ್ನೆಲೆಯನ್ನು ಗಮನಿಸಿದಾಗ ಎಲ್ಲ ಮಕ್ಕಳಿಗೂ ಏಕರೂಪವಾದ ಶಿಕ್ಷಣವನ್ನು ಕೊಡುವುದು ಉಚಿತವಾಗಿರಲಿಲ್ಲ. ಈ ಮಕ್ಕಳ ವಯೋಮಾನಕ್ಕೆ ತಕ್ಕ ಶಿಕ್ಷಣ, ಬೋಧನಾಕ್ರಮ ಮತ್ತು ಇತರ ಹಸ್ತಕ್ಷೇಪಗಳನ್ನು ನಿರೂಪಿಸುವುದು ಅಗತ್ಯವಾಯಿತು. ಈ ಅಂಶಗಳನ್ನೂ ಗಮನದಲ್ಲಿರಿಸಿಕೊಂಡು 5+3+3+4 ಮಾದರಿಯ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲಾಗಿದೆ. ಜೊತೆಗೆ, ಮಕ್ಕಳ ವಿದ್ಯಾಭ್ಯಾಸಕ್ಕೊಂದು ನಿರ್ದಿಷ್ಟ ಚೌಕಟ್ಟು ಮತ್ತು ಸೂಕ್ತ ಪರಿಸರದ ನಿರ್ಮಾಣವೂ ಅಗತ್ಯ. ಉನ್ನತ ಶಿಕ್ಷಣದಲ್ಲಿ ಸಾಂಸ್ಥಿಕವಾದ ಒಂದು ಚೌಕಟ್ಟಿನ ಅಗತ್ಯವಿದ್ದರೆ ಶಾಲಾ ವಿದ್ಯಾಭ್ಯಾಸದಲ್ಲಿ ಪರಿಸರ ವ್ಯವಸ್ಥೆ ಮತ್ತು ಚೌಕಟ್ಟುಗಳೇ ಮುಖ್ಯವಾಗುತ್ತವೆ.



ಪ್ರೊ. ಎಂ.ಕೆ. ಶ್ರೀಧರ್
ಶಿಕ್ಷಣ ವಿಭಾಗದ ಕೇಂದ್ರೀಯ ಸಲಹಾ ಸಮಿತಿ ಸದಸ್ಯರು

ಶಿಕ್ಷಣ ವ್ಯವಸ್ಥೆಯನ್ನು ಮುನ್ನಡೆಸುವ ಜವಾಬ್ದಾರಿ ಶಿಕ್ಷಕರದ್ದಾಗಿರುತ್ತದೆ. ಆದುದರಿಂದ ಶಿಕ್ಷಕರ ಸಾಮರ್ಥ್ಯ ವೃದ್ಧಿಯೂ ಇನ್ನೊಂದು ಪ್ರಮುಖ ಅಂಶ. ಈ ಹಿನ್ನೆಲೆಯಲ್ಲಿ ಶಿಕ್ಷಕವೃತ್ತಿಯನ್ನು ಸೇರಲು ಬಯಸುವವರು ಸೇವೆಗೆ ಸೇರುವ ಮುನ್ನ ನಾಲ್ಕು ವರ್ಷಗಳ ಸಮಗ್ರ ತರಬೇತಿಯನ್ನು ಪಡೆಯುವುದು ಕಡ್ಡಾಯವಾಗಿದೆ. ಈ ನಿಯಮವು ಶಿಕ್ಷಣದ ಗುಣ ಮಟ್ಟದ ಮೇಲೆ ಧನಾತ್ಮಕವಾದ ಪ್ರಭಾವವನ್ನು ಬೀರುವುದು ನಿಶ್ಚಿತ.

ಇನ್ನು ಪಠ್ಯಕ್ರಮವನ್ನು ಗಮನಿಸುವುದಾದರೆ, ವೃತ್ತಿ ಶಿಕ್ಷಣ ಮತ್ತು ಸಾಮಾನ್ಯ ಶಿಕ್ಷಣಗಳನ್ನು ಒಟ್ಟಿಗೆ ತರಲಾಗಿದೆ. ಪಠ್ಯ, ಪಠ್ಯೇತರ, ವಿಜ್ಞಾನ, ಕಲೆ ಮುಂತಾದ ಎಲ್ಲ ವಿಷಯಗಳನ್ನು ಪಠ್ಯಕ್ರಮದ ಅಡಿಯಲ್ಲಿಯೇ ತರಲಾಗಿದೆ. ಎಲ್ಲದರಲ್ಲಿಯೂ ಭಾರತೀಯತ್ವ ಮತ್ತು ಭಾರತೀಯ ಜ್ಞಾನದ ಮೇಲೆ ಹೆಚ್ಚಿನ ಒತ್ತು ನೀಡಲಾಗಿದೆ.

ಶಾಲಾ ಸಮುಚ್ಚಯದ ನವೀನ ಪರಿಕಲ್ಪನೆಯನ್ನು ಹೊಸ ಶಿಕ್ಷಣ ನೀತಿಯ ಅಡಿಯಲ್ಲಿ ಜಾರಿಗೆ ತರಲಾಗುತ್ತದೆ. ಸುಮಾರು 10 ರಿಂದ 15 ಶಾಲೆಗಳು ತಮ್ಮ ಸಂಪನ್ಮೂಲಗಳನ್ನು ಪರಸ್ಪರ ಹಂಚಿಕೊಳ್ಳುವುದು ಮತ್ತು ಸಹಭಾಗಿ ಸಮುದಾಯಗಳನ್ನು ರೂಪಿಸುವುದು ಇದರ ಉದ್ದೇಶ. ದ್ವಿತೀಯ ಹಂತದ ಸೆಕೆಂಡರಿ ಶಿಕ್ಷಣದಲ್ಲಿ ಇಂದು ಇರುವ ಕಲೆ, ವಾಣಿಜ್ಯ ಮತ್ತು ವಿಜ್ಞಾನ ಎಂಬ ಪ್ರತ್ಯೇಕತೆಗಳನ್ನು ತೊಡೆದು ಹಾಕಲಾಗುವುದು.

ಉನ್ನತ ಶಿಕ್ಷಣದಲ್ಲಿ ಕೇಂದ್ರೀಕೃತವಾದ ಏಕರೂಪ ಶಿಕ್ಷಣ ಪದ್ಧತಿಯನ್ನು ತ್ಯಜಿಸಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಿಗೆ ಸ್ವಾಯತ್ತತೆಯನ್ನು ನೀಡಲಾಗುವುದು. ವಿಷಯಗಳ ಸಂಯೋಜನೆ, ನಾವೀನ್ಯ, ಆಯ್ಕೆಯ ಸ್ವಾತಂತ್ರ್ಯ, ಪ್ರವೇಶ ಮತ್ತು ನಿರ್ಗಮನ ಅವಕಾಶ, ವಾರ್ಷಿಕ ಪ್ರಮಾಣ ಪತ್ರ ನೀಡುವಿಕೆ ಮುಂತಾದ ವಿಷಯಗಳಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಸ್ವಾಯತ್ತತೆ ಇರುತ್ತದೆ. ಇಂದು ಒಂದು ವಿಶ್ವವಿದ್ಯಾಲಯವು ಸುಮಾರು 300 ರಿಂದ 400 ಕಾಲೇಜುಗಳನ್ನು ನಿಯಂತ್ರಿಸುತ್ತಿದೆ. ಈ ರೀತಿಯ ಸ್ಥೂಲ ಘಟಕಗಳ ಮೇಲಿನ ಗಮನದ ಬದಲು ಕಾಲೇಜುಗಳಂತಹ ಕಿರು ಘಟಕಗಳ ಮೇಲೆ ಗಮನವನ್ನು ಕೇಂದ್ರೀಕರಿಸಲಾಗುವುದು. ಹೊಸ ನೀತಿಯ ಅಡಿಯಲ್ಲಿ ವಿಶ್ವವಿದ್ಯಾಲಯಗಳಿಗೆ ಸಂಯೋಜಿಸಿಕೊಳ್ಳುವ ಪದ್ಧತಿಯು ಇರುವುದಿಲ್ಲ.

ಬಹುವಿಷಯಕ ಶಿಕ್ಷಣ (Multi Disciplinary Education): ಇಂದಿನ ಶಿಕ್ಷಣ ಸಂಹಿತೆಯಲ್ಲಿ ಏಕರೂಪದ ವಿಷಯಗಳ ಸಂಯೋಜನೆಗೆ (ಉದಾ: ವಿಜ್ಞಾನ, ಕಲೆ, ವಾಣಿಜ್ಯ) ಒತ್ತು ನೀಡಲಾಗಿದೆ. ಈ ಶಿಕ್ಷಣ ಸಂಹಿತೆಯ ಗಡಿಗಳೇ ಗೋಡೆಗಳಾಗಿ ಪರಿವರ್ತಿತವಾಗಿ ವಿದ್ಯಾರ್ಥಿಯ ಸಮಗ್ರ ವಿಕಾಸಕ್ಕೆ ತಡೆಗಳಾಗಿವೆ. ಇಂದು ನಮ್ಮ ಶೇ 70 ರಷ್ಟು ಕಾಲೇಜುಗಳು ಕೇವಲ ಒಂದು ವಿಷಯದ ಮೇಲಿನ ಶಿಕ್ಷಣವನ್ನು ನೀಡುತ್ತಿವೆ. ಇನ್ನು ಮುಂದೆ ಈ ಪದ್ಧತಿ ಇರುವುದಿಲ್ಲ. ಇಂದಿನ ಕಾರ್ಯಕ್ಷೇತ್ರ (ಉದ್ಯೋಗ ಜಗತ್ತು ಅಲ್ಲ) ಮತ್ತು ಮಾನವನ ಮಿದುಳಿನ ಜಗತ್ತು ಬಹು ವಿಷಯಕವಾಗಿದ್ದು ಕೇವಲ ಒಂದೇ ವಿಷಯದ ಮೇಲೆ ಗಮನವನ್ನು ಹರಿಸುವುದು ಮಾನವನ ಮಿದುಳಿಗೆ ಒಗ್ಗದ ವಿಷಯವಾಗಿದೆ. ಇದು ಉದ್ಯೋಗ ಕ್ಷೇತ್ರದಲ್ಲಿಯೂ ಸಲ್ಲದ ವಿಷಯವಾಗಿದೆ. ಕೇವಲ ಒಂದೇ ವಿಷಯದ ಮೇಲಿನ ಜ್ಞಾನದಿಂದ ಹೊಸ ಕಲ್ಪನೆಗಳನ್ನು ರೂಪಿಸುವುದು ಸಾಧ್ಯವಿಲ್ಲ. ಆದರೆ ಹೊಸ ಶಿಕ್ಷಣ ನೀತಿಯಲ್ಲಿ ವಿದ್ಯಾರ್ಥಿಗಳಿಗೆ ತಮಗೆ ಬೇಕಾದ, ತಮ್ಮ ಅಭಿರುಚಿ ಮತ್ತು ಪ್ರತಿಭೆಗಳಿಗೆ ಪೂರಕವಾದ ವಿಷಯಗಳನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವಿರುತ್ತದೆ. ವಿದ್ಯಾರ್ಥಿಯು ಬಯಸಿದರೆ ಭೌತಶಾಸ್ತ್ರದ ಜೊತೆಗೆ ಅರ್ಥಶಾಸ್ತ್ರವನ್ನೋ ಇತಿಹಾಸವನ್ನೋ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿರುತ್ತಾನೆ.

ನಮ್ಮೆಲ್ಲರ ಊಹೆಗೂ ಮೀರಿದ ಕಲ್ಪನಾ ಸಾಮರ್ಥ್ಯವನ್ನು ಇಂದಿನ ಯುವ ಪೀಳಿಗೆ ಹೊಂದಿದೆ. ಇಂದಿನ ಯುವಕರು ಬೇರೆಯೇ ರೀತಿಯಲ್ಲಿ ಯೋಚಿಸುತ್ತಾರೆ, ಅವರು ಕಾರ್ಯನಿರ್ವಹಿಸುವ ಕ್ರಮವೇ ಬೇರೆ. ಅವರ ಆಸಕ್ತಿಯ ವಿಷಯಗಳೂ ಬೇರೆಯಾಗಿವೆ. ಈ ಯುವಪೀಳಿಗೆಯ ನಿರೀಕ್ಷೆಗಳಿಗನುಗುಣವಾಗಿ ಹೊಸ ಶಿಕ್ಷಣ ನೀತಿಯನ್ನು ರೂಪಿಸಲಾಗಿದೆ. ಎಲ್ಲ ನಿಯಂತ್ರಣ ವ್ಯವಸ್ಥೆಗಳು ಮತ್ತು ಸಂಸ್ಥೆಗಳ ಆಡಳಿತಗಳು ಇದಕ್ಕೆ ಸಹಾಯಕವಾಗಿರುತ್ತವೆ. ಶಿಕ್ಷಣ ಕ್ಷೇತ್ರದಲ್ಲಿ ಇದೊಂದು ಬೃಹತ್ ಹೆಜ್ಜೆ. ಜಾರಿಯ ಹಂತದಲ್ಲಿ ಇದರಲ್ಲಿ ನ್ಯೂನತೆಗಳು ಕಂಡುಬರಬಹುದು. ಅವುಗಳನ್ನು ನಿವಾರಿಸಿಕೊಂಡು ಮುನ್ನಡೆಯುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ.

# ಕೋಲಾರ ಜಿಲ್ಲೆಯ ಕೆಲವು ದೇವಾಲಯಗಳು




**ದೇಗುಲದರ್ಶನ ಮಾಲಿಕೆ-೨**





ದೇಗುಲ ದರ್ಶನ ಮಾಲಿಕೆಯಲ್ಲಿ ಈ ತಿಂಗಳ ಪರಿಚಯ ಕೋಲಾರ ಜಿಲ್ಲೆಯ ಕೆಲವು ದೇವಾಲಯಗಳಿಗೆ ಸಂಬಂಧಿಸಿದೆ. ಈ ಜಿಲ್ಲೆಯ ಇತಿಹಾಸ ಬಹು ಪ್ರಾಚೀನವಾದುದು. ಈ ಪ್ರಾಂತ್ಯದ ಊರುಹಳ್ಳಿಗಳಲ್ಲಿ ಕಂಡುಬರುವ ದೇಗುಲಗಳು ಗಂಗ, ನೊಳಂಬ, ಚೋಳ, ಪಲ್ಲವ, ಹೊಯ್ಸಳ, ವಿಜಯನಗರ ಸಾಮ್ರಾಜ್ಯಗಳಿಂದ ಈಚಿನ ಪಾಳೇಗಾರರವರೆಗೆ ಅನೇಕ ಆಳರಸರ ನಿರ್ಮಿತಿಗಳಾಗಿವೆ.

ಬೆಂಗಳೂರಿನಿಂದ ಕೋಲಾರಕ್ಕೆ ಹೋಗುವ ದಾರಿಯಲ್ಲಿ ಸಿಗುವ ಹೊಸಕೋಟೆ ತಾಲೂಕಿನ ಚಿಕ್ಕನಹಳ್ಳಿ ಎಂಬ ಗ್ರಾಮದಲ್ಲಿ ಏಳನೆಯ ಶತಮಾನದಷ್ಟು ಹಳೆಯ ಶಿವಲಿಂಗವೂ ಪಲ್ಲವ ಶೈಲಿಯ ಹಲವು ವಿಗ್ರಹಗಳೂ ಕಂಡುಬರುತ್ತವೆ.

ಕೋಲಾರ ಪಟ್ಟಣದಲ್ಲಿ ಅನೇಕ ಪ್ರಸಿದ್ಧ ದೇವಾಲಯಗಳಿವೆ. ನಗರ ದೇವತೆ ಕೋಲಾರಮ್ಮನ ದೇಗುಲ ಒಂಬತ್ತನೆಯ ಶತಮಾನದ ಗಂಗರ ಆಳ್ವಿಕೆಯ ಕಾಲದ್ದು. ಮುಂದೆ ಚೋಳ, ವಿಜಯನಗರದ ಅರಸರ ಆಳ್ವಿಕೆಯ ಅವಧಿಯಲ್ಲಿ ವಿಸ್ತರಣೆಗೊಂಡಿದೆ. ಇಲ್ಲಿನ ಗರ್ಭಗುಡಿಯಲ್ಲಿ ಶಿಲೆ ಮತ್ತು ಗಾರೆಯಿಂದ ನಿರ್ಮಿತವಾದ ಸಪ್ತಮಾತೃಕೆಯರ ವಿಗ್ರಹಗಳಿವೆ.

ಸನಿಹದ ಸೋಮೇಶ್ವರ ದೇವಾಲಯ ವಿಜಯನಗರ ಕಾಲದಲ್ಲಿ ಪುನರ್ನಿರ್ಮಿತಿಗೊಂಡಿದೆ. ದೇವಾಲಯದ ೬೦ ಕಂಬಗಳ ರಂಗಮಂಟಪ, ಕಲ್ಯಾಣಮಂಟಪ, ವಸಂತಮಂಟಪ ಹಾಗೂ ರಾಜಗೋಪುರಗಳು ಬಹು ಕಲಾತ್ಮಕವಾಗಿವೆ.

ಕೋಲಾರದ ದೊಡ್ಡಪೇಟೆಯಲ್ಲಿರುವ ವೆಂಕಟೇಶ್ವರ ಮತ್ತು ಕೋಟೆಯ ಆಂಜನೇಯ ದೇವಾಲಯಗಳು ಇಲ್ಲಿನ ಇತರ ಮುಖ್ಯ ಗುಡಿಗಳು.

ಕೋಲಾರ ಜಿಲ್ಲೆ ಮುಳಬಾಗಿಲು ತಾಲೂಕಿನಲ್ಲಿರುವ ಉತ್ತನೂರು ಉತ್ತಮಕಂಚಿ ಎಂಬ ಹೆಸರುಪಡೆದಿದ್ದ ಪುಣ್ಯಕ್ಷೇತ್ರ. ಇಲ್ಲಿನ ವರದರಾಜಸ್ವಾಮಿ ಪ್ರಯೋಗಚಕ್ರ ಹಿಡಿದ ಭಂಗಿಯಲ್ಲಿರುವುದು ವಿಶೇಷ. ಸ್ವಾಮಿಯ ಎದುರಿಗೆ ಗರುಡನ ಬದಲಾಗಿ ಪ್ರಹ್ಲಾದನ ಮೂರ್ತಿಯಿರುವುದು ಅಪೂರ್ವ. ಉತ್ತನೂರಿನ ಉತ್ತಮೇಶ್ವರ ದೇವಾಲಯ ನೊಳಂಬರ ಕಾಲದ ಗುಡಿ. ಇಲ್ಲಿ ಭೈರವ, ಹರಿಹರ, ವೈಷ್ಣವಿ ಮತ್ತಿತರ ಪುರಾತನ ಕಾಲದ ಮೂರ್ತಿಗಳಿವೆ. ಸಮೀಪದಲ್ಲಿರುವ ಚೌಡೇಶ್ವರಿ ದೇವಾಲಯದಲ್ಲಿರುವ ದೇವಿಯ ಮೂರ್ತಿ ಅತ್ಯಾಕರ್ಷಕವಾಗಿದೆ. ಈ ಗುಡಿಯೂ ಒಂಬತ್ತನೇ ಶತಮಾನದಷ್ಟು ಪ್ರಾಚೀನವೆನ್ನಬಹುದು.

ಕೋಲಾರದ ಸಮೀಪದ ಅಂತರಗಂಗೆ ಬೆಟ್ಟದ ಮೇಲೆ ತೇರಹಳ್ಳಿ ಎಂಬ ಗ್ರಾಮ. ಇಲ್ಲಿ ವೀರಗಂಗನು ಸ್ಥಾಪಿಸಿರುವ ಗಂಗಾಧರೇಶ್ವರ ಗುಡಿಯಿದೆ. ದೇವಾಲಯ ಮತ್ತು ಆವರಣ ಶಿಥಿಲಸ್ಥಿತಿಯಲ್ಲಿದ್ದು, ವೈಷ್ಣವಿ, ವಿಷ್ಣು ಮೊದಲಾದ ಪ್ರಾಚೀನ ಕಾಲದ ಮೂರ್ತಿಗಳಿವೆ.

ಕೋಲಾರದಿಂದ ಬೆಂಗಳೂರಿಗೆ ಬರುವ ದಾರಿಯಲ್ಲಿ ನರಸಾಪುರದಲ್ಲಿ ಬಾಣೇಶ್ವರ ಗುಡಿಯಿದೆ. ಇದು ಹತ್ತನೆಯ ಶತಮಾನದ ಚೋಳರ ಆಳ್ವಿಕೆಯ ಕಾಲದ್ದು. ಇಲ್ಲಿರುವ ನಟರಾಜನ ಲೋಹದ ವಿಗ್ರಹ ಅತ್ಯಂತ ಸುಂದರವಾದುದು.

ಅಲ್ಲೇ ಸಮೀಪದ ಬೆಳ್ಳೂರಿನಲ್ಲಿ ಕಣ್ವೇಶ್ವರ ಮತ್ತು ವರದರಾಜ ದೇವಾಲಯಗಳನ್ನು ದರ್ಶಿಸಬಹುದು. ಎರಡೂ ಪ್ರಾಚೀನ ದೇವಾಲಯಗಳಾಗಿದ್ದು ಈಚೆಗೆ ಜೀರ್ಣೋದ್ಧಾರ ಮಾಡಲಾಗಿದೆ . ವರದರಾಜ ದೇಗುಲದಲ್ಲಿ ಈಚೆಗೆ ಸೀತಾರಾಮರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ.

**ಕೆಂಗೇರಿ ಚಕ್ರಪಾಣಿ/ಟಿ.ಎಸ್. ಗೋಪಾಲ್**

**ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ವೀಕ್ಷಿಸಿ**
**http://YouTube.com/AnanthkumarPratishthana**





# ಅನಾರೋಗ್ಯದ ಆರ್ಥಿಕ ಹೊರೆ ತಪ್ಪಿಸಿದ ಅನಂತಕುಮಾರ್

ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಖ್ಯಾತ ವೈದ್ಯರು

ವೈದ್ಯರು ಜೆನೆರಿಕ್ ಔಷಧಿಗಳನ್ನು ಶಿಫಾರಸು ಮಾಡಲು ತೊಡಗಿದರೆ ಔಷಧಗಳ ಮೇಲೆ ಜನರು ಮಾಡುವ ಖರ್ಚು ಶೇ 90 ರಷ್ಟು ಕಡಿಮೆಯಾಗುತ್ತದೆ. ಇದನ್ನು ಮನಗಂಡ ಕೇಂದ್ರ ಸರಕಾರವು ದೇಶದ ಎಲ್ಲ ಕಡೆಗಳಲ್ಲಿಯೂ ಜನೌಷಧಿ ಮಳಿಗೆಗಳನ್ನು ತೆರೆದಿದೆ. ಬೇರೆ ಅಂಗಡಿಗಳಲ್ಲಿ 9000 ರೂಪಾಯಿಗಳಿಗೆ ದೊರೆಯುವ ಔಷಧಿ ಜನೌಷಧಿ ಮಳಿಗೆಗಳಲ್ಲಿ ಕೇವಲ 1000 ರೂಪಾಯಿಗಳಿಗೆ ದೊರೆಯುತ್ತದೆ. ಹೀಗೆ ಕಡಿಮೆ ಖರ್ಚಿನಲ್ಲಿ ಉತ್ತಮ ಗುಣಮಟ್ಟದ ಔಷಧ ದೊರೆಯುವಂತೆ ಜನೌಷಧಿ ಯೋಜನೆಯನ್ನು ಜಾರಿಗೆ ತರಲು ಶ್ರಮಿಸಿದವರು ನಮ್ಮ ಅನಂತಕುಮಾರರು.

ನಮ್ಮ ದೇಶದಲ್ಲಿ 60 ವರ್ಷಕ್ಕೆ ನಿವೃತ್ತರಾದ ಅನೇಕ ವ್ಯಕ್ತಿಗಳು ಪ್ರತಿ ತಿಂಗಳೂ ಹಲವಾರು ಸಾವಿರ ರೂಪಾಯಿಗಳನ್ನು ಔಷಧಗಳಿಗಾಗಿ ಖರ್ಚು ಮಾಡಬೇಕಾಗಿತ್ತು. ಬರುವ ನಿವೃತ್ತಿ ವೇತನದಲ್ಲಿ ಅಷ್ಟೊಂದು ಹಣವನ್ನು ಔಷಧಿಗಳಿಗೆ ವ್ಯಯಿಸಿದರೆ ಇತರ ಖರ್ಚುಗಳಿಗೆ ಏನು ಮಾಡಬೇಕು? ಇಂದು ನಮ್ಮ ದೇಶದಲ್ಲಿ ಡಯಾಬಿಟೀಸ್, ರಕ್ತದ ಏರೊತ್ತಡ, ಹೃದಯಸಂಬಂಧಿ ಕಾಯಿಲೆಗಳು ಸರ್ವೇಸಾಮಾನ್ಯವಾಗಿ ಬಿಟ್ಟಿವೆ. ಔಷಧಗಳ ಮೇಲೆ ಜನರು ಮಾಡುವ ವೆಚ್ಚವು ಅವರ ಆರ್ಥಿಕ ಸಾಮರ್ಥ್ಯವನ್ನು ಮೀರಿದೆ. ಜನಸಾಮಾನ್ಯರ ಆರ್ಥಿಕ ಸಮಸ್ಯೆಯನ್ನು ಪರಿಹರಿಸಬೇಕೆಂಬ ಪ್ರಧಾನಿಯವರ ಸಂಕಲ್ಪವನ್ನು ಅನುಲಕ್ಷಿಸಿ ಜನೌಷಧಿ ಯೋಜನೆಯೊಂದೇ ಇದಕ್ಕೆ ಪರಿಹಾರ ಎಂದು ಯೋಚಿಸಿದ ಅನಂತಕುಮಾರರು ದೇಶದ ಮೂಲೆ ಮೂಲೆಗಳಲ್ಲಿಯೂ ಜನೌಷಧಿ ಮಳಿಗೆಗಳ ಸ್ಥಾಪನೆಗೆ ಕಾರಣರಾದರು. ಕರ್ನಾಟಕ ರಾಜ್ಯವೊಂದರಲ್ಲಿಯೇ ಸುಮಾರು 500 ಮಳಿಗೆಗಳು ಪ್ರಾರಂಭವಾಗಿದ್ದರೆ ಅದರ ಶ್ರೇಯಸ್ಸು ಅನಂತಕುಮಾರರಿಗೆ ಸಲ್ಲಬೇಕು.

ಹೃದಯದ ಕವಾಟಗಳಲ್ಲಿ ಇರುವ ತಡೆಗಳನ್ನು ನಿವಾರಿಸಲು ಆಂಜಿಯೋಪ್ಲಾಸ್ಟ್ ಮಾಡುತ್ತಾರೆ. ನಂತರ ರಕ್ತನಾಳಗಳು ಸಂಕುಚಿತಗೊಳ್ಳಬಾರದು ಎಂದು ಸ್ಟೆಂಟ್ ಎಂಬ ಸ್ಟೀಲ್ ಜಾಲರಿಯನ್ನು ಅಳವಡಿಸುತ್ತಾರೆ. ಕೆಲವು ವರ್ಷಗಳ ಮೊದಲು ಈ ಸ್ಟೆಂಟುಗಳನ್ನು ಹೊರದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದರು. ಅದರ ಆಮದು ದರ ಸುಮಾರು 12000 ದಿಂದ 19000 ರೂಪಾಯಿಗಳಷ್ಟಿದ್ದರೆ ಮಧ್ಯವರ್ತಿಗಳ ಮೂಲಕ ಅದು ದೆಹಲಿ ತಲುಪುವಾಗ 44000 ರೂಪಾಯಿಗಳಿಗೆ ಏರುತ್ತಿತ್ತು. ನಂತರ ಬೆಂಗಳೂರು, ಕೊಚ್ಚಿ, ಚೆನ್ನೈ ಮುಂತಾದ ನಗರಗಳ ರೋಗಿಗಳನ್ನು ತಲುಪುವಾಗ ಅದರ ಬೆಲೆ ಒಂದೂಕಾಲು ಲಕ್ಷ ರೂಪಾಯಿಗಳಿಗೆ ಏರುತ್ತಿತ್ತು. ಇದನ್ನು ಗಮನಿಸಿದ ಪ್ರಧಾನಿಯವರು ಸ್ಟೆಂಟುಗಳ ಬೆಲೆಯನ್ನು ನಿಯಂತ್ರಣ ಮಾಡಬೇಕೆಂದು ಅನಂತಕುಮಾರರಿಗೆ ಸೂಚಿಸಿದರು. ಅನಂತಕುಮಾರರು ಎಲ್ಲ ವಿಷಯಗಳನ್ನೂ ಪರಿಶೀಲಿಸಿ ರೋಗಿಗಳ ಮೇಲೆ ಆರ್ಥಿಕ ಭಾರವೂ ಆಗಬಾರದು, ಸರಬರಾಜು ಮಾಡುವವರಿಗೆ ನಷ್ಟವೂ ಆಗಬಾರದು ಎಂಬ ರೀತಿಯಲ್ಲಿ ಸ್ಟೆಂಟುಗಳ ಗರಿಷ್ಠ ದರವನ್ನು ಮಿತಿಗೊಳಿಸಿದರು. ಇದರಿಂದ ಲಾಭಕೋರರ ದುರಾಸೆಗೆ ಕಡಿವಾಣ ಬಿದ್ದಿತು. ಎಲ್ಲರಿಗೂ ಸ್ಟೆಂಟುಗಳು ಸುಲಭವಾಗಿ ಕಡಿಮೆ ದರದಲ್ಲಿ ದೊರೆಯುವಂತಾಯಿತು. ಇಂದು ದೇಶದಲ್ಲಿ ಸಾಮಾನ್ಯ ಮತ್ತು ಔಷಧಿ ಸೂಸುವ ಸ್ಟೆಂಟುಗಳು ಕ್ರಮಾಗತವಾಗಿ 8261 ಮತ್ತು 30000 ರೂಪಾಯಿಗಳಿಗೆ ಲಭ್ಯವಾಗುತ್ತಿವೆ. ಇದರ ಜೊತೆಗೆ ಪ್ರಧಾನಮಂತ್ರಿ ಆರೋಗ್ಯ ಕವಚದ ಮೂಲಕ ಅರ್ಹ ಬಡವರಿಗೆ ಸ್ಟೆಂಟುಗಳ ವೆಚ್ಚವನ್ನು ತುಂಬಿಕೊಡುವ ಯೋಜನೆಯನ್ನೂ ಅನಂತಕುಮಾರರು ಜಾರಿಗೆ ತಂದರು.



ಜನಸಾಮಾನ್ಯರನ್ನು ಬಾಧಿಸುವ ಇನ್ನೊಂದು ಸಮಸ್ಯೆ ಮಂಡಿಚಿಪ್ಪಿನ ಸವೆತ ಮತ್ತು ಅದರ ಚಿಕಿತ್ಸೆ. ಮಂಡಿಚಿಪ್ಪಿನ ಸವೆತದ ಕಾರಣದಿಂದ ನಡೆಯಲು ಸಾಧ್ಯವಾಗದಿರುವ ಜನರಿಗೆ ಸವೆದ ಮಂಡಿಚಿಪ್ಪಿನ ಬದಲಿಗೆ ಸ್ಟೀಲಿನಿಂದ ಮಾಡಿದ ಕೃತಕ ಮಂಡಿಚಿಪ್ಪನ್ನು ಅಳವಡಿಸಲಾಗುತ್ತದೆ. ಇದು ಒಂದು ವಿಶೇಷ ಶಸ್ತ್ರಚಿಕಿತ್ಸೆಯಾಗಿದ್ದು ಖಾಸಗಿ ಆಸ್ಪತ್ರೆಗಳು ಒಂದೂವರೆಯಿಂದ ಎರಡೂವರೆ ಲಕ್ಷ ರೂಪಾಯಿಗಳ ವರೆಗೆ ವಸೂಲು ಮಾಡುತ್ತಿದ್ದರು. ಮಂಡಿಚಿಪ್ಪಿನ ಬದಲಾವಣೆ ಶಸ್ತ್ರಚಿಕಿತ್ಸೆಯು ಜನಸಾಮಾನ್ಯರಿಗೆ ಕನಸಿನ ಮಾತಾಗಿತ್ತು. ಈ ವಿಷಯದಲ್ಲಿಯೂ ಮಧ್ಯೆ ಪ್ರವೇಶಿಸಿದ ಅನಂತಕುಮಾರರು ಮಂಡಿಚಿಪ್ಪಿನ ಗರಿಷ್ಠ ಬೆಲೆಯನ್ನು 40000 ರೂಪಾಯಿಗಳಿಗೆ ಮಿತಿಗೊಳಿಸಿದರು. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಂತಹ ಅನೇಕ ಕೇಂದ್ರಗಳಲ್ಲಿ ಕೇವಲ 55000 ರೂಪಾಯಿಗಳಿಗೆ ಮಂಡಿಚಿಪ್ಪಿನ ಚಿಕಿತ್ಸೆ ದೊರೆಯುವ ಹಾಗೆ ಮಾಡಿದ ಅನಂತಕುಮಾರರು ಬಡವರ ಪಾಲಿಗೆ ನಿತ್ಯಸ್ಮರಣೀಯರು.

ಮುಟ್ಟಿನ ಕಾಲದ ನೈರ್ಮಲ್ಯವು ಹೆಂಗಸರನ್ನು ಕಾಡುವ ಪ್ರಮುಖ ಸಮಸ್ಯೆ. ಹೆಂಗಸರು ಬಳಸುವ ಸ್ಯಾನಿಟರಿ ಪ್ಯಾಡುಗಳ ಬೆಲೆಯನ್ನು ದಂಧೆಕೋರರು ಗಗನಕ್ಕೇರಿಸಿದರು. ಇಂತಹ ಸಂದರ್ಭವನ್ನು ಕೆಲವು ಧೂರ್ತರು ಪ್ರಧಾನಮಂತ್ರಿಯವರನ್ನು ಅವಮಾನಿಸಲು ಬಳಸಿಕೊಂಡರು. ಆಗ ಪ್ರಧಾನಿಯವರ ಸೂಚನೆಯ ಮೇರೆಗೆ ಅನಂತಕುಮಾರರು ತಜ್ಞರ ಸಲಹೆಯನ್ನು ಪಡೆದುಕೊಂಡು ಸಾಂದ್ರೀಕೃತ (Compressed) ಹತ್ತಿಯನ್ನು ಬಳಸಿ ಮರುಬಳಕೆಗೆ ಯೋಗ್ಯವಾದ ಸ್ಯಾನಿಟರಿ ಪ್ಯಾಡುಗಳನ್ನು ತಯಾರಿಸುವ ವ್ಯವಸ್ಥೆಯನ್ನು ಮಾಡಿದರು ಇದರಿಂದ ಸ್ಯಾನಿಟರಿ ಪ್ಯಾಡುಗಳು ಸುಲಭ ಬೆಲೆಯಲ್ಲಿ ಎಲ್ಲ ಮಹಿಳೆಯರಿಗೂ ಲಭ್ಯವಾದವು. ಇದರಿಂದಾಗಿ ಮಹಿಳೆಯರಿಗೆ ಮುಟ್ಟಿನ ಕಾಲದ ನೈರ್ಮಲ್ಯದ ಕೊರತೆಯಿಂದ ಉಂಟಾಗುವ ಬಿಳಿಸೆರಗು, ಬೆನ್ನು ನೋವು, ನಿರಂತರ ಸೋಂಕು, ಗರ್ಭಕಂಠದ ಉರಿಯೂತ (Cervicitis) ಮತ್ತು ಗರ್ಭಕಂಠದ ಕ್ಯಾನ್ಸರ್ (Cervical Cancer) ಮುಂತಾದ ಸಮಸ್ಯೆಗಳ ಬಾಧೆ ಕಡಿಮೆಯಾಯಿತು.

ಈ ರೀತಿಯಾಗಿ ಜನಸಾಮಾನ್ಯರ ಆರೋಗ್ಯ ಮತ್ತು ಆರ್ಥಿಕ ಸ್ಥಿತಿಯ ಬಗ್ಗೆ ಕಾಳಜಿ ವಹಿಸಿ ಕ್ರಮ ತೆಗೆದುಕೊಂಡ ಅನಂತಕುಮಾರರು ನಿತ್ಯಸ್ಮರಣೀಯರು.

(ಸೌಜನ್ಯ : ಆಕಾಶವಾಣಿ, ಮೈಸೂರು)

# ಜೆನೆರಿಕ್ ಔಷಧಗಳ ಮಹತ್ವ

ಡಾ. ಬಿ.ಎನ್.ಗಂಗಾಧರ್
ನಿರ್ದೇಶಕರು, ನಿಮ್ಹಾನ್ಸ್



ಅನೇಕ ಔಷಧಿ ತಯಾರಿಕಾ ಕಂಪೆನಿಗಳು ರಾಸಾಯನಿಕ ಸಂಯುಕ್ತಗಳ ಬಗ್ಗೆ ಹಲವಾರು ವರ್ಷ ಸತತವಾಗಿ ಸಂಶೋಧನೆ ನಡೆಸಿ ಔಷಧಿಗಳನ್ನು ತಯಾರಿಸಿರುತ್ತವೆ. ಹೀಗೆ ಸಂಶೋಧಿಸಲ್ಪಟ್ಟ ಔಷಧಿಗಳ ಗುಣಮಟ್ಟವನ್ನು ಪರಿಶೀಲಿಸಿ ಅದರ ಉತ್ಪಾದನೆಗೆ ಅನುಮತಿ ನೀಡಲಾಗುತ್ತದೆ. ಸಂಶೋಧನೆ ಮಾಡಲು ಮತ್ತು ಉತ್ಪಾದನೆಯ ಅನುಮತಿ ಪಡೆಯಲು ಅಪಾರ ಹಣ ವ್ಯಯವಾಗುತ್ತದೆ. ಒಂದು ಔಷಧಿಯು ಮಾರುಕಟ್ಟೆಗೆ ಬರುವ ವೇಳೆಗೆ ವ್ಯಯವಾದ ಶ್ರಮ ಮತ್ತು ಹಣವನ್ನು ಮರಳಿ ಪಡೆಯುವವರೆಗೆ ಆ ಔಷಧಿಯ ಪೇಟೆಂಟ್ ಅಥವಾ ಹಕ್ಕನ್ನು ಆ ಕಂಪೆನಿಯು ತನ್ನ ವಶದಲ್ಲಿರಿಸಿಕೊಳ್ಳುತ್ತದೆ. ಪೇಟೆಂಟಿನ ಅವಧಿ ಮುಗಿಯುವ ವರೆಗೆ ಆ ಔಷಧಿಯನ್ನು ಉತ್ಪಾದನೆ ಮಾಡಿ ಮಾರುಕಟ್ಟೆಗೆ ಬಿಡುವ ಏಕಸ್ವಾಮ್ಯ ಹಕ್ಕನ್ನು ಕಂಪೆನಿ ಹೊಂದಿರುತ್ತದೆ. ಈ ಅವಧಿ ಮುಗಿದ ನಂತರ ಸಾರ್ವಜನಿಕ ಬೇಡಿಕೆಗಳಿಗನುಗುಣವಾಗಿ ಯಾರು ಬೇಕಾದರೂ ಆ ಔಷಧಿಯನ್ನು ಉತ್ಪಾದಿಸಬಹುದು. ಆಗ ಇದನ್ನು ಜೆನೆರಿಕ್ ಅಥವ ಸಾರ್ವತ್ರಿಕ ಔಷಧಿ ಎನ್ನುತ್ತಾರೆ.

ಈ ರೀತಿಯ ಜೆನೆರಿಕ್ ಔಷಧಿಯ ತಯಾರಿಕೆಯಲ್ಲಿ ಭಾರತವು ಅಗ್ರಸ್ಥಾನದಲ್ಲಿದೆ. ಪ್ರಪಂಚದ 22 ದೇಶಗಳ ಜೆನೆರಿಕ್ ಔಷಧಗಳ ಬೇಡಿಕೆಯನ್ನು ಭಾರತವು ಪೂರೈಸುತ್ತಿದೆ. ಅಮೆರಿಕದ ಶೇ 40 ರಷ್ಟು ಜೆನೆರಿಕ್ ಔಷಧವನ್ನು ಭಾರತ ಪೂರೈಸುತ್ತಿದೆ. ಅಮೆರಿಕದಲ್ಲಿ ವೈದ್ಯರು ಶಿಫಾರಸು ಮಾಡುವ ಔಷಧಗಳಲ್ಲಿ ಶೇ 90 ರಷ್ಟು ಜೆನೆರಿಕ್ ಔಷಧಗಳೇ ಇರುತ್ತವೆ.

ಜೆನೆರಿಕ್ ಔಷಧಗಳು ಜನರಿಗೆ ಕೈಗೆಟಕುವ ಬೆಲೆಯಲ್ಲಿ ದೊರೆಯುತ್ತವೆ. ವೈದ್ಯರು ಔಷಧಗಳ ಜೆನೆರಿಕ್ ಹೆಸರನ್ನು ಬರೆಯುವ ಬದಲು ಬ್ರಾಂಡಿನ ಹೆಸರನ್ನು ಬರೆದರೆ ಅಂಗಡಿಯಲ್ಲಿ ಅದೇ ಔಷಧದ ಹಲವಾರು ಹೆಸರುಗಳನ್ನು ಗಮನಿಸಿ ನೀವು ಯಾವ ಕಂಪೆನಿಯ ಔಷಧ ತೆಗೆದುಗೊಳ್ಳಬೇಕೆಂದು ತಿಳಿಯದೆ ಗಲಿಬಿಲಿಗೊಳಗಾಗುತ್ತೀರಿ. ವೈದ್ಯರಿಗೂ ನಿರ್ದಿಷ್ಟ ಕಂಪೆನಿಯ ಔಷಧದ ಹೆಸರನ್ನು ಬರೆಯಬೇಕೆ ಅಥವಾ ಅದರಲ್ಲಿರುವ ರಾಸಾಯನಿಕ ಸಂಯುಕ್ತದ ಹೆಸರನ್ನು ಬರೆಯಬೇಕೆ ಎಂದು ಗೊಂದಲ ಉಂಟಾಗುತ್ತದೆ. ಹೀಗಾಗಿ, ಸರಕಾರವು 2012 ರಲ್ಲಿ ಒಂದು ಕಾಯಿದೆಯನ್ನು ಮಾಡಿ ಔಷಧಿಗಳನ್ನು ಶಿಫಾರಸು ಮಾಡುವಾಗ ಬ್ರಾಂಡ್ ಹೆಸರನ್ನು ಬರೆಯಬಾರದು, ಅದರ ಜೆನೆರಿಕ್ ಹೆಸರು ಮತ್ತು ಅದನ್ನು ತೆಗೆದುಕೊಳ್ಳಬೇಕಾದ ಪ್ರಮಾಣವನ್ನು (5 ಮಿಗ್ರಾಂ, 10 ಮಿಗ್ರಾಂ ಇತ್ಯಾದಿ) ಮಾತ್ರ ಬರೆಯಬೇಕೆಂದು ವಿಧಿಸಿತು.

ಈ ಕಾಯಿದೆಯ ಸಮರ್ಪಕ ಜಾರಿಗೆ ಈ ಜೆನೆರಿಕ್ ಔಷಧಗಳು ದೊರೆಯುವ ಅಂಗಡಿಗಳ ಸರಣಿಯ ಅಗತ್ಯವೂ ಇರುವುದನ್ನು ಮನಗಂಡು ಆಗಿನ ಕೇಂದ್ರ ಸರಕಾರವು ಜನೌಷಧಿ ಮಳಿಗೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತೆರೆಯುವ ನಿರ್ಧಾರವನ್ನು ತೆಗೆದುಕೊಂಡಿತು. ಅಂದು ಔಷಧ ವಿಭಾಗದ ಹೊಣೆಹೊತ್ತ ಸಚಿವರಾಗಿದ್ದ ಅನಂತಕುಮಾರರು "ನನ್ನ ಕಾಯಿಲೆಯನ್ನು ವಾಸಿಮಾಡಿಕೊಳ್ಳುವ ಜವಾಬ್ದಾರಿ ನನ್ನದಾಗಿರುವುದರಿಂದ ಔಷಧ ಖರೀದಿಯ ಹಕ್ಕು ಕೂಡ ನನ್ನ ಬಳಿಯಿರಬೇಕು. ಈ ದಿಸೆಯಲ್ಲಿ ಜೆನೆರಿಕ್ಔಷಧಗಳನ್ನು ಆಂದೋಲನದ ಮೂಲಕ ಜನಪ್ರಿಯಗೊಳಿಸಬೇಕು. ಎಲ್ಲ ವೈದ್ಯರನ್ನೂ ಸಂಪರ್ಕಿಸಿ ಅವರೆಲ್ಲರೂ ಔಷಧಗಳ ಜೆನೆರಿಕ್ ಹೆಸರನ್ನು ಬರೆಯುವಂತೆ ಅವರ ಮನವೊಲಿಸಬೇಕು" ಎಂದು ಹೇಳುತ್ತಿದ್ದರು. ಜನೌಷಧಿಗಳು ಜನಪ್ರಿಯವಾದಾಗ ಅದರ ಲಾಭ ಸಾಮಾನ್ಯ ಜನರಿಗೆ ದೊರೆಯುತ್ತದೆ. ಔಷಧ ಶಿಫಾರಸು ಮಾಡುವಾಗಲೂ ಪಾರದರ್ಶಕತೆ ಇರುತ್ತದೆ. ಹೀಗಾಗಿ ಜನಸಾಮಾನ್ಯರು ಚಿಕಿತ್ಸೆಗಾಗಿ ಮಾಡುವ ಖರ್ಚಿನಲ್ಲಿ ಅಪಾರ ಇಳಿಕೆಯಾಗುವುದರ ಜೊತೆಗೆ ವೈದ್ಯಕೀಯ ವ್ಯವಸ್ಥೆಗೆ ಇತರ ಕಾರಣಗಳಿಗಾಗಿ ಲಾಭವುಂಟಾಗುತ್ತದೆ ಎಂಬ ಉದ್ದೇಶದಿಂದ ಸರಕಾರವು ಜನೌಷಧಿ ಯೋಜನೆಗೆ ಹೆಚ್ಚಿನ ಗಮನವನ್ನು ನೀಡುತ್ತಿದೆ. (ಸೌಜನ್ಯ : ಆಕಾಶವಾಣಿ, ಮೈಸೂರು)

# ಸಂಸದೀಯ ವ್ಯವಹಾರಗಳ ಕುಶಲ ನಿರ್ವಹಣೆಗೊಂದು ಮಾದರಿ



ಪುಟ 2 ರಿಂದ

**ಕೊನೆಯ ಅಧಿವೇಶನದ ದಾಖಲೆ**

ಸಂಸದೀಯ ವ್ಯವಹಾರಗಳ ಸಚಿವರಾಗಿ ಅನಂತಕುಮಾರರ ಸೇವಾವಧಿಯು ಹಲವಾರು ದಾಖಲೆಗಳನ್ನು ನಿರ್ಮಿಸಿದೆ. ಅವರು ಕಾರ್ಯ ನಿರ್ವಹಿಸಿದ ಕೊನೆಯ ಅಧಿವೇಶನವಂತೂ 20 ವರ್ಷಗಳಲ್ಲೇ ಅತಿ ಹೆಚ್ಚು ಫಲಪ್ರದ ಅಧಿವೇಶನವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಅಧಿವೇಶನದ ಆರಂಭಕ್ಕೂ ಮುನ್ನ ಅವರು ನಾಲ್ಕನೆಯ ಹಂತದ ಕ್ಯಾನ್ಸರ್ ಕಾಯಿಲೆಗೆ ತುತ್ತಾಗಿರುವುದು ದೃಢಪಟ್ಟಿತ್ತು. ತಮ್ಮ ಜೀವಿತದ ಕೊನೆ ಸಮೀಪಿಸುತ್ತಿರುವುದನ್ನು ಅವರು ಮನಗಂಡಿರಬೇಕು. ಹೀಗಾಗಿ ತಮ್ಮ ಉಳಿದ ಜೀವನವನ್ನು ಇನ್ನಷ್ಟು ಸಕ್ರಿಯವಾಗಿ ಕಳೆಯಲು ನಿರ್ಧರಿಸಿದ ಅವರು 2018ರ ಮಾನ್ಸೂನ್ ಅಧಿವೇಶನದಲ್ಲಿ ತಮ್ಮ ಅನಾರೋಗ್ಯವನ್ನು ಲೆಕ್ಕಿಸದೆ ಕೆಲಸ ಮಾಡಲಾರಂಭಿಸಿದರು. ಈ ಅಧಿವೇಶನದಲ್ಲಿ ಸರಕಾರವು ಅನೇಕ ಕಠಿಣ ಸವಾಲುಗಳನ್ನು ಎದುರಿಸಿತು. ಅವುಗಳಲ್ಲೊಂದು, ರಾಜ್ಯಸಭೆಯ ಉಪಸಭಾಪತಿ ಸ್ಥಾನಕ್ಕೆ ನಡೆದ ಚುನಾವಣೆ. ರಾಜ್ಯಸಭೆಯಲ್ಲಿ ಮಿತ್ರಪಕ್ಷಗಳಿಗೆ ಬಹುಮತವಿರಲಿಲ್ಲ. ಇನ್ನು ಉಪಸಭಾಪತಿಯ ಹುದ್ದೆಯೂ ವಿರೋಧಪಕ್ಷಗಳ ಪಾಲಾದರೆ ರಾಜ್ಯಸಭೆಯ ನಿರ್ವಹಣೆ ಕಷ್ಟವಾಗುತ್ತಿತ್ತು. ಯಾವುದೇ ಪ್ರಮುಖ ಮಸೂದೆಗಳಿಗೆ ಅನುಮತಿ ಪಡೆಯುವುದು ಸಾಧ್ಯವೇ ಇರಲಿಲ್ಲ. ಅನೇಕ ವಿರೋಧ ಪಕ್ಷಗಳು ಜಂಟಿಯಾಗಿ ಕಾಂಗ್ರೆಸ್ ಪಕ್ಷದ ಶ್ರೀ ಬಿ ಕೆ ಹರಿಪ್ರಸಾದರನ್ನು ಅಭ್ಯರ್ಥಿಯಾಗಿ ನಿಲ್ಲಿಸಿದ್ದರು. ಮಿತ್ರಪಕ್ಷಗಳ ಪರವಾಗಿ ಸಂಯುಕ್ತ ಜನತಾ ದಳದ ಹರಿವಂಶ ನಾರಾಯಣ ಸಿಂಗ್ ಅಭ್ಯರ್ಥಿಯಾದರು. ತೀವ್ರ ಸೆಣಸಾಟಕ್ಕೆ ಸಾಕ್ಷಿಯಾದ ಈ ಚುನಾವಣೆಯಲ್ಲಿ ಅವರು 2 4 ಮತಗಳ ಅಂತರದಲ್ಲಿ ಗೆಲುವು ಸಾಧಿಸಿದರು. ಈ ಗೆಲುವಿನ ಹಿಂದೆ ಸೋಲರಿಯದ ಸರದಾರ ಅನಂತಕುಮಾರರ ಪರಿಶ್ರಮ ಅಸಾಮಾನ್ಯ. ಇದೇ ಅಧಿವೇಶನದಲ್ಲಿ ವಿರೋಧ ಪಕ್ಷಗಳು ಸರಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನೂ ಮಂಡಿಸಿದ್ದವು. ಇದನ್ನು ಯಶಸ್ವಿಯಾಗಿ ನಿಭಾಯಿಸುವಲ್ಲಿ ಅನಂತಕುಮಾರರ ಪಾತ್ರ ಹಿರಿದಾಗಿತ್ತು.

ಅನಂತಕುಮಾರರು ಭಾಗವಹಿಸಿದ ಈ ಕೊನೆಯ ಅಧಿವೇಶನದಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಹೆಚ್ಚು ಕಲಾಪಗಳು ನಡೆದವು. ಇದು ಕಳೆದ 1 5 ವರ್ಷಗಳ ದಾಖಲೆಯಾಯಿತು. ಲೋಕಸಭೆಯ ಒಟ್ಟು ಅವಧಿಯ ಶೇ 17ರಷ್ಟು ಪ್ರಶ್ನೋತ್ತರ ಕಲಾಪ, ಶೇ 44ಶಾಸನ ನಿರೂಪಣೆ, ಶೇ 23ರಷ್ಟು ಶಾಸನೇತರ ವಿಚಾರ ಚರ್ಚೆ, ಶೇ 6 ರಷ್ಟು ಹಣಕಾಸು ಕುರಿತಾದ ಚರ್ಚೆ, ಶೇ 1 1 ರಷ್ಟು ಇತರ ಕಲಾಪಗಳಿಗಾಗಿ ಬಳಕೆಯಾಗಿದೆ. ಇದೇ ಸಂದರ್ಭದಲ್ಲಿ ರಾಜ್ಯಸಭೆಯಲ್ಲಿ ಶೇ 13ರಷ್ಟು ಪ್ರಶ್ನೋತ್ತರ, ಶೇ 50ರಷ್ಟು ಶಾಸನ ನಿರೂಪಣೆ, ಶೇ 30ರಷ್ಟು ಶಾಸನೇತರ ವಿಚಾರ ಚರ್ಚೆ, ಶೇ 4ರಷ್ಟು ಹಣಕಾಸು ಹಾಗೂ ಶೇ 4ರಷ್ಟು ಇತರ ಕಲಾಪಗಳಲ್ಲಿ ಬಳಕೆಯಾದದ್ದು ದಾಖಲೆಯೇ ಸರಿ. ಇದೊಂದೇ ಅಧಿವೇಶನದಲ್ಲಿ 4140 ಲಿಖಿತ ಪ್ರಶ್ನೆಗಳಿಗೆ ಕಲಾಪದಲ್ಲಿ ಉತ್ತರ ದೊರೆತಿತ್ತು. ಪ್ರತಿ ಪಕ್ಷಗಳ ಪ್ರತಿಭಟನೆಯಲ್ಲಿ 8 ಗಂಟೆ 26 ನಿಮಿಷಗಳ ಕಲಾಪದ ಅವಧಿಯು ವ್ಯರ್ಥವಾಗಿದ್ದರೂ ಒಟ್ಟು 112 ಗಂಟೆಗಳ ಅವಧಿಯ ಗರಿಷ್ಠ ಕಲಾಪ ನಡೆಸಿದ್ದು ಸಂಸದೀಯ ವ್ಯವಹಾರಗಳ ಸಚಿವರ ಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಈ ಅಧಿವೇಶನದಲ್ಲಿಯೂ ಸುಮಾರು 20 ಮಹತ್ವದ ಕಾಯಿದೆಗಳಿಗೆ ಅಂಗೀಕಾರ ದೊರೆತವು. ಅವುಗಳಲ್ಲಿ ಕೆಲವು:

1. ಪರಿಶಿಷ್ಟ ಹಾಗೂ ಪಂಗಡಗಳ ಮೇಲಿನ ದೌರ್ಜನ್ಯ ತಿದ್ದುಪಡಿ ಕಾಯಿದೆ,
2. ರಾಷ್ಟ್ರೀಯ ಹಿಂದುಳಿದ ಆಯೋಗಕ್ಕೆ ಸಾಂವಿಧಾನಿಕ ಸ್ಥಾನಮಾನ ನೀಡುವ ತಿದ್ದುಪಡಿ ಮಸೂದೆ,
3. ಅಪ್ರಾಪ್ತರ ಮೇಲಿನ ಅತ್ಯಾಚಾರಿಗಳಿಗೆ ಗಲ್ಲು ಶಿಕ್ಷೆ ವಿಧಿಸುವ ತಿದ್ದುಪಡಿ, ಕಾಯಿದೆ.
4. ಆರ್ಥಿಕ ಅಪರಾಧಗಳ ವಂಚಕರ ಕಾಯಿದೆ,
5. ಭ್ರಷ್ಟಾಚಾರ ನಿಯಂತ್ರಣ ತಿದ್ದುಪಡಿ ಕಾಯಿದೆ,
6. ವಾಣಿಜ್ಯ ವ್ಯಾಜ್ಯಗಳ ತ್ವರಿತ ವಿಲೇವಾರಿ ಮಸೂದೆ

ಇವುಗಳ ಜೊತೆಗೆ ಅನೇಕ ಖಾಸಗಿ ವಿಧೇಯಕಗಳು ಮಂಡನೆಯಾಗಿದ್ದವು. ಶೂನ್ಯ ವೇಳೆಯಲ್ಲಿ 500ಕ್ಕೂ ಹೆಚ್ಚು ವಿಷಯಗಳ ಮೇಲೆ ಚರ್ಚೆ ನಡೆದಿತ್ತು.

2014 ರಲ್ಲಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಮೊದಲ ಅವಧಿಯ ಕೊನೆಯ ಅಧಿವೇಶನದವರೆಗೆ ಲೋಕಸಭೆಯಲ್ಲಿ ಒಟ್ಟು 1 1 4 ಮಸೂದೆಗಳು ಹಾಗೂ ರಾಜ್ಯಸಭೆಯಲ್ಲಿ 6 ಪ್ರಮುಖ ವಿಧೇಯಕಗಳು ಮಂಡನೆಯಾಗಿದ್ದವು. ಈ ಪೈಕಿ 136 ವಿಧೇಯಕಗಳು ಲೋಕಸಭೆಯಲ್ಲಿ ಹಾಗೂ 1 1 2 ವಿಧೇಯಕಗಳು ರಾಜ್ಯಸಭೆಯಲ್ಲಿ ಅಂಗೀಕಾರ ಪಡೆದಿವೆ. ಎರಡೂ ಸದನಗಳಲ್ಲಿ ಅಂಗೀಕಾರ ಪಡೆದು ಕಾಯಿದೆಯಾಗಿ ಮಾರ್ಪಟ್ಟ ವಿಧೇಯಕಗಳು ಒಟ್ಟು 121. ರೈಲ್ವೇ ಮತ್ತು ಸಾಮಾನ್ಯ ಮುಂಗಡ ಪತ್ರಗಳನ್ನು ಸಂಯೋಜಿಸಿ ಒಟ್ಟಿಗೇ ಮಂಡಿಸುವ ನಿರ್ಧಾರವನ್ನೂ ಇದೇ ಕಾಲದಲ್ಲಿ ತೆಗೆದುಕೊಳ್ಳಲಾಯಿತು. ಅಘೋಷಿತ ವಿದೇಶೀ ಆದಾಯ ಮತ್ತು ಆಸ್ತಿಯ ವಿರುದ್ಧದ ಕಪ್ಪು ಹಣ ಮತ್ತು ತೆರಿಗೆ ಕಾಯಿದೆಯನ್ನು ಬ್ಯಾಂಕ್ ಮತ್ತು ಇತರ ಹಣಕಾಸು ಸಂಸ್ಥೆಗಳಿಗೂ ಅನ್ವಯವಾಗುವಂತೆ ಅಂಗೀಕರಿಸಲಾಯಿತು. ಆರ್ಥಿಕ ಸುಧಾರಣೆಯ ಇನ್ನೊಂದು ಹೆಜ್ಜೆಯಾಗಿ 1992 ರ ಸೆಬಿ ಕಾಯಿದೆಗೆ ತಿದ್ದುಪಡಿ ತರಲಾಯಿತು. ವಿಮೆಯ ಹೆಸರಿನಲ್ಲಿ ನಡೆಯುತ್ತಿದ್ದ ದಂಧೆಯನ್ನು ನಿಯಂತ್ರಿಸಲು ವಿಮಾ ತಿದ್ದುಪಡಿ ವಿಧೇಯಕ, ಸಹಾಯಧನದ ನೇರ ವರ್ಗಾವಣೆಗೆ ಅನುಕೂಲಿಸಲು ಆಧಾರ್ ಕಾಯಿದೆಗೆ ತಿದ್ದುಪಡಿ, ಬೋನಸ್ ತಿದ್ದುಪಡಿ ವಿಧೇಯಕ, ಬಾಕಿ ವಸೂಲಿ ವಿಧೇಯಕ, ಬೇನಾಮಿ ವಹಿವಾಟು ತಿದ್ದುಪಡಿ ವಿಧೇಯಕ, ಕಂಪನಿ ಕಾನೂನು ತಿದ್ದುಪಡಿ ವಿಧೇಯಕ, ಸ್ಥಳೀಯ ಗ್ರಾಮೀಣ ಬ್ಯಾಂಕುಗಳ ತಿದ್ದುಪಡಿ ವಿಧೇಯಕ, ಪಾವತಿ ವ್ಯವಸ್ಥೆ ತಿದ್ದುಪಡಿ ವಿಧೇಯಕ, ಆರ್ಥಿಕ ಸುಧಾರಣಾ ವಿಧೇಯಕಗಳು ಮುಂತಾದ ದೇಶದ ಸಮಗ್ರ ಆರ್ಥಿಕ ಬೆಳವಣಿಗೆಗೆ ಪೂರಕವಾದ ವಿಧೇಯಕಗಳನ್ನು ಜಾರಿಗೆ ತರಲಾಯಿತು. ಜನಸಾಮಾನ್ಯರಿಗೆ ಭದ್ರತೆಯನ್ನು ಒದಗಿಸುವ ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆ, ಅಟಲ್ ಪಿಂಚಣಿ ಯೋಜನೆ, ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆಗಳೂ ಇದೇ ಕಾಲದಲ್ಲಿ ಜಾರಿಗೆ ಬಂದವು.

ಮೂಲಸೌಕರ್ಯದ ವಿಚಾರದಲ್ಲಿ ಸಾರ್ವಜನಿಕ ಜಾಗದ ತಿದ್ದುಪಡಿ ವಿಧೇಯಕ ಹಾಗೂ ರಿಯಲ್ ಎಸ್ಟೇಟ್ ಅಭಿವೃದ್ಧಿ ಮತ್ತು ನಿಯಂತ್ರಣ ವಿಧೇಯಕಗಳು ಸಂಸತ್ತಿನಲ್ಲಿ ಅಂಗೀಕಾರ ಪಡೆದವು. ನ್ಯಾಯಾಂಗದ ಸುಧಾರಣೆಯ ನಿಟ್ಟಿನಲ್ಲಿ ತುರ್ತು ನ್ಯಾಯದಾನದ ಉದ್ದೇಶದೊಂದಿಗೆ ಆರ್ಬಿಟ್ರೇಷನ್ ಹಾಗೂ ಕೌನ್ಸೆಲಿಂಗ್ ತಿದ್ದುಪಡಿ ವಿಧೇಯಕ ಮತ್ತು ಹೈಕೋರ್ಟಿನ ವಾಣಿಜ್ಯ ವಿಭಾಗೀಯ ವಿಧೇಯಕಗಳು ಅಂಗೀಕಾರ ಪಡೆದವು. ಕಾರ್ಮಿಕರ ಹಿತದೃಷ್ಟಿಯಿಂದ ಅಪ್ರೆಂಟಿಸ್ ತಿದ್ದುಪಡಿ ವಿಧೇಯಕ, ಕಾರ್ಮಿಕ ಕಾನೂನು ತಿದ್ದುಪಡಿ ಹಾಗೂ ಬಾಲಕಾರ್ಮಿಕ ನಿರ್ಬಂಧ ಹಾಗೂ ನಿಯಂತ್ರಣ ವಿಧೇಯಕಗಳು ಸಂಸತ್ತಿನಲ್ಲಿ ಮಂಡನೆಯಾಗಿ ಬಲಗೊಂಡವು. ಸಾಮಾಜಿಕ ನ್ಯಾಯದ ನಿಟ್ಟಿನಲ್ಲಿ ಬಾಲಾಪರಾಧಿ ನ್ಯಾಯ ವಿಧೇಯಕ, ಪರಿಶಿಷ್ಟ ಜಾತಿ ಪಂಗಡದ ವಿರುದ್ಧ ದೌರ್ಜನ್ಯ ತಿದ್ದುಪಡಿ, ಅಶಕ್ತರ ಹಕ್ಕು ರಕ್ಷಣಾ ವಿಧೇಯಕ, ಗರ್ಭಿಣಿ ಸೌಲಭ್ಯ ವಿಧೇಯಕ ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆಗೆ ಅತ್ಯಂತ ಕಠಿಣ ಕ್ರಮಗಳನ್ನು ವಿಧಿಸಿದ ಗಣಿ ಮತ್ತು ಖನಿಜ ವಿಧೇಯಕಗಳು ದಾಖಲಾರ್ಹ ಸಂಗತಿಗಳು.

ಇವೆಲ್ಲದರ ಹೊರತಾಗಿ ಸಂಸತ್ತು ರಾಷ್ಟ್ರೀಯ ಮಹತ್ವದ ಅನೇಕ ವಿಷಯಗಳ ಮೇಲೆ ಅಲ್ಪಾವಧಿ ಚರ್ಚೆಗಳನ್ನೂ ನಡೆಸಿತು. ಕಾಶ್ಮೀರದ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಸುವುದರ ಜೊತೆಗೆ ಸರ್ವ ಪಕ್ಷಗಳ ನಿಯೋಗವೊಂದು ಕಾಶ್ಮೀರಕ್ಕೆ ಭೇಟಿ ನೀಡಿತು. ನಾಗರಿಕತೆ ತಿದ್ದುಪಡಿ ಮಸೂದೆ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ರಾಷ್ಟ್ರೀಯ ಶಿಕ್ಷಣ ನೀತಿ, ಆಂಧ್ರಪ್ರದೇಶ ರಾಜ್ಯ ಪುನಾರಚನೆ ಮುಂತಾದ ವಿಷಯಗಳ ಬಗ್ಗೆಯೂ ವ್ಯಾಪಕವಾದ ಚರ್ಚೆ ನಡೆಯಿತು.

**ಕೊನೆಯ ದಿನಗಳು**

ಇಷ್ಟೆಲ್ಲ ನಡೆಯುತ್ತಿರುವ ಕಾಲದಲ್ಲಿಯೇ ಅನಂತಕುಮಾರರು ಬಹುವಾಗಿ ಗೌರವಿಸುತ್ತಿದ್ದ, ಪಿತಾಸಮಾನರಾದ ಅಟಲ್ ಬಿಹಾರಿ ವಾಜಪೇಯಿಯವರು ದಿನಾಂಕ 16/08/2018 ರಂದು ನಿಧನರಾದರು. ಅದರ ಹಿಂದಿನ ದಿನವಷ್ಟೇ ಅನಂತಕುಮಾರರು ಬೆಂಗಳೂರಿನಲ್ಲಿ ಶಸ್ತ್ರಕ್ರಿಯೆಯೊಂದಕ್ಕೆ ಒಳಗಾಗಿದ್ದರು. ಮಾಜಿ ಪ್ರಧಾನಿಯವರ ಅಂತ್ಯಕ್ರಿಯೆಗೆ ಸಂಬಂಧಿಸಿದ ಎಲ್ಲ ಏರ್ಪಾಡುಗಳನ್ನೂ ಸಂಸದೀಯ ವ್ಯವಹಾರಗಳ ಖಾತೆಯೇ ನಿರ್ವಹಿಸಬೇಕಾಗಿತ್ತು. ಹೀಗಾಗಿ ವೈದ್ಯರ ಸಲಹೆಯನ್ನೂ ಲೆಕ್ಕಿಸದೆ ಅನಂತಕುಮಾರರು ದೆಹಲಿಗೆ ತೆರಳಿ ಅಂತ್ಯಕ್ರಿಯೆ ಮತ್ತು ರಾಷ್ಟ್ರೀಯ ಶೋಕ ಸಭೆಗಳ ಜವಾಬ್ದಾರಿಯನ್ನು ನಿರ್ವಹಿಸಿದರು. ಜೊತೆಗೆ ಅವರ ಚಿತಾಭಸ್ಮವನ್ನು ಕಾವೇರಿ ನದಿಯಲ್ಲಿ ವಿಸರ್ಜಿಸಲು ತಾವೇ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋದರು.

ಅನಂತಕುಮಾರ್ ತಮ್ಮ ದೇಹ ತ್ಯಾಗದ ಕೊನೆಯ ದಿನದವರೆಗೂ ತಮಗೆ ಅತ್ಯಂತ ಪ್ರಿಯವಾಗಿದ್ದ ಜನೌಷಧಿ ಯೋಜನೆಯ ಜಾರಿಯನ್ನು ಸಮೀಕ್ಷಿಸುತ್ತಿದ್ದರು. ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್ ಎಂಬ ಉಕ್ತಿಯಂತೆ ಮೃತ್ಯುವಿನ ಸಮ್ಮುಖದಲ್ಲಿಯೂ ತಮ್ಮ ವೃತ್ತಿಧರ್ಮವನ್ನು ಬಿಡದೆ ಪಾಲಿಸಿದ ಅನಂತಕುಮಾರರು ನಮ್ಮ ದೇಶ ಕಂಡ ಅತ್ಯುತ್ತಮ ಸಂಸದೀಯ ಪಟು ಮಾತ್ರವಲ್ಲ, "ರಾಷ್ಟ್ರ ಮೊದಲು" ಎಂಬ ತತ್ತ್ವಕ್ಕೆ ನಿಷ್ಠರಾಗಿ ಬದುಕನ್ನು ಸಾಗಿಸಿದವರು.

**- ಕೆ. ಜನಾರ್ದನ ತುಂಗ**

ವ್ಯಕ್ತಿ ವಿಶೇಷ ಮಾಲಿಕೆ

# ಆತ್ಮನಿರ್ಭರ ಭಾರತದ ಕನಸು ಕಂಡ ದತ್ತೋಪಂತ ಠೇಂಗಡಿ

10/11/1920. ದೀಪಾವಳಿಯ ಶುಭದಿನ. ಅಂದು ದತ್ತೋಪಂತನ ಜನನವಾಯಿತು. ಆರ್ವಿಯ ಖ್ಯಾತ ವಕೀಲ ಬಾಪುರಾವ್ ಠೇಂಗಡಿ ಮತ್ತು ಶ್ರೀಮತಿ ಜಾನಕೀಬಾಯಿಯವರ ಮಗನಾಗಿ ಜನಿಸಿದ ದತ್ತೋಪಂತ ಠೇಂಗಡಿಯವರು, ಮುಂದೆ ಕೋಟ್ಯಂತರ ಜನರ ಬಾಳಿಗೆ ಬೆಳಕನ್ನು ನೀಡಿದ ಮಹಾನುಭಾವರೆನಿಸಿದರು. ಮಹಾರಾಷ್ಟ್ರದ ವಾರ್ಧಾ ಜಿಲ್ಲೆಯ ಆರ್ವಿ ಎಂಬ ಚಿಕ್ಕ ಊರಿನಲ್ಲಿ ಜನಿಸಿದ ದತ್ತೋಪಂತರು ಪ್ರಧಾನಿ ಶ್ರೀ ಅಟಲ್ ಬಿಹಾರಿ ವಾಜಪೇಯಿ, ಉಪಪ್ರಧಾನಿ ಲಾಲ್ ಕೃಷ್ಣ ಅದ್ವಾನಿಯವರಂತಹ ಹಿರಿಯ ನಾಯಕರಿಂದ ಹಿಡಿದು ಸಾಮಾನ್ಯ ಕಾರ್ಯಕರ್ತರವರೆಗಿನ ಜನರ ಪ್ರೀತಿ, ವಿಶ್ವಾಸ, ಗೌರವಗಳನ್ನು ಏಕಪ್ರಕಾರವಾಗಿ ಗಳಿಸಿದ ಮಹನೀಯರು.

ದತ್ತೋಪಂತನಿಗೆ ಬಾಲ್ಯದಲ್ಲೇ ಓದಿನ ಗೀಳು ಹತ್ತಿಸಲು ಪ್ರೇರಕವಾದುದು ಆರ್ವಿಯ ಗ್ರಂಥಾಲಯ. ದತ್ತೋಪಂತ ಪ್ರೌಢಶಾಲಾ ಶಿಕ್ಷಣ ಮುಗಿಸುವುದರೊಳಗೆ ಆ ಗ್ರಂಥಾಲಯದಲ್ಲಿದ್ದ ಹತ್ತು ಸಾವಿರ ಪುಸ್ತಕಗಳಲ್ಲಿ ಎಂಟೂವರೆ ಸಾವಿರ ಪುಸ್ತಕಗಳನ್ನು ಓದಿ ಮುಗಿಸಿದ್ದ. ಇನ್ನುಳಿದವು ಲೇಖನಸಂಗ್ರಹಗಳೆಂಬ ಕಾರಣಕ್ಕೋ ಏನೋ ಓದಿರಲಿಲ್ಲ. ಆ ಗ್ರಂಥಾಲಯವು ತನಗೆ 'ಸ್ಫೂರ್ತಿ ಹಾಗೂ ಬದುಕಿನ ದಿಕ್ಕು ತೋರಿದ ಕೇಂದ್ರ," ಎಂದು ದತ್ತೋಪಂತ ಯಾವಾಗಲೂ ಸ್ಮರಿಸುತ್ತಿದ್ದರು.

ಆರ್ವಿಯ ಮುನಿಸಿಪಲ್ ಹೈಸ್ಕೂಲಿನಲ್ಲಿ ಪ್ರೌಢ ಶಿಕ್ಷಣವನ್ನು ಪಡೆದ ದತ್ತೋಪಂತ್ ನಾಗಪುರದ ಕಾನೂನು ಕಾಲೇಜಿನಲ್ಲಿ ಕಾನೂನು ವ್ಯಾಸಂಗ ಮಾಡಿದರು. ನಂತರ ಅದೇ ಪಟ್ಟಣದ ಮಾರಿಸ್ ಕಾಲೇಜಿನಿಂದ ಕಾನೂನು ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನೂ ಪಡೆದರು. ಬಾಲ್ಯದಲ್ಲಿಯೇ ನಾಯಕತ್ವದ ಲಕ್ಷಣಗಳನ್ನು ಪ್ರದರ್ಶಿಸಿದ ಠೇಂಗಡಿಯವರು ಆರ್ವಿಯ ಮುನಿಸಿಪಲ್ ಹೈಸ್ಕೂಲಿನ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿದ್ದರು. ಮುಂದೆ 1936 ರಿಂದ 1938 ರ ವರೆಗೆ ಹಿಂದೂಸ್ತಾನ್ ಸೋಷಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್ ಸದಸ್ಯರಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದರು. 1942 ರಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪೂರ್ಣಾವಧಿ ಪ್ರಚಾರಕರಾದರು. 1950-51 ರಲ್ಲಿ ಭಾರತದ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಸಂಘಟನಾ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದರು. ಕಮ್ಯೂನಿಸ್ಟ್ ಪಕ್ಷದ ಅಂಚೆ ಮತ್ತು ರೈಲ್ವೇ ನೌಕರರ ಸಂಘದ ಜೊತೆಯೂ ಅವರು ಸಂಪರ್ಕ ಹೊಂದಿದ್ದರು.ಭಾರತೀಯ ಜನಸಂಘದ ಸಂಸ್ಥಾಪಕ ಸದಸ್ಯರಲ್ಲಿ ಒಬ್ಬರಾದ ಅವರು ಪಕ್ಷದ ಸಂಘಟನಾ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ್ದರು.

ಇಂದು ಇಡೀ ಜಗತ್ತಿನಲ್ಲಿಯೇ ಅತಿ ದೊಡ್ಡ ಕಾರ್ಮಿಕ ಸಂಘಟನೆ ಎಂದು ಹೆಸರಾಗಿರುವ ಭಾರತೀಯ ಮಜ್ದೂರ್ ಸಂಘದ ಸ್ಥಾಪನೆ ಅವರ ಜೀವನದ ಮಹತ್ವದ ಮೈಲಿಗಲ್ಲು. 1950 ರ ದಶಕದಲ್ಲಿ ಭಾರತದ ಕಾರ್ಮಿಕರಂಗವು ಕಮ್ಯೂನಿಸ್ಟ್ ತತ್ತ್ವಗಳಿಗೆ ನಿಷ್ಠರಾದ ನಾಯಕರ ಹಿಡಿತದಲ್ಲಿತ್ತು. ಮಾರ್ಕ್ಸ್ ವಾದದಿಂದ ಪ್ರೇರಿತರಾಗಿದ್ದ ಅವರು ವರ್ಗ ಸಂಘರ್ಷದ ಮೂಲಕ ಸಮಾಜವಾದವನ್ನು ತರಲು ಕಾರ್ಮಿಕರನ್ನು ಬಳಸಿಕೊಳ್ಳುತ್ತಿದ್ದರು. ಈ ವರ್ಗಸಂಘರ್ಷವು ಅಂತಿಮವಾಗಿ ಸಮಾಜದ ಹಾಗೂ ದೇಶದ ವಿಘಟನೆಗೆ ಕಾರಣವಾಗಬಹುದು ಎಂಬುದನ್ನು ಮನಗಂಡ ಠೇಂಗಡಿಯವರು 'ಪ್ರತಿಯೊಬ್ಬ ರಾಷ್ಟ್ರವಾದಿಯೂ ದೇಶದ ಬೇರೆ ಬೇರೆ ಅವಯವಗಳನ್ನು ಪ್ರತಿನಿಧಿಸುತ್ತಾರೆ' ಎಂಬ ನಂಬಿಕೆಯ ಆಧಾರದಲ್ಲಿ ಹೊಸ ರಾಷ್ಟ್ರಮಟ್ಟದ ಕಾರ್ಮಿಕ ಸಂಸ್ಥೆಯೊಂದನ್ನು ಸ್ಥಾಪಿಸಲು ನಿರ್ಧರಿಸಿದರು. ಹೀಗೆ 1955 ರಲ್ಲಿ ಸ್ಥಾಪನೆಯಾದ ಭಾರತೀಯ ಮಜ್ದೂರ್ ಸಂಘದಲ್ಲಿ ಸ್ಥಾಪಕ ಸದಸ್ಯರನ್ನು ಬಿಟ್ಟರೆ ಒಬ್ಬನೇ ಒಬ್ಬ ಸದಸ್ಯನಿರಲಿಲ್ಲ, ಸ್ವಂತ ಕಟ್ಟಡವಿರಲಿಲ್ಲ. ಚಟುವಟಿಕೆಗಳನ್ನು ನಡೆಸಲು ಆರ್ಥಿಕ ಬೆಂಬಲವೂ ಇರಲಿಲ್ಲ. ತಳಮಟ್ಟದ ಸಂಘಟನೆಯಂತೂ ಇರಲೇ ಇಲ್ಲ. ಈ ರೀತಿಯಾಗಿ ಶೂನ್ಯದಿಂದ ಆರಂಭವಾದ ಸಂಘಟನೆಯೊಂದು ದೇಶದ ಅತಿದೊಡ್ಡ ಕಾರ್ಮಿಕರ ಸಂಘಟನೆಯೆಂದು ಮಾನ್ಯತೆ ಪಡೆದಿರುವುದು ಠೇಂಗಡಿಯವರ ಕರ್ತೃತ್ವ ಮತ್ತು ನೇತೃತ್ವಗಳಿಗೆ ಸಾಕ್ಷಿ.



ಠೇಂಗಡಿಯವರು ತಮ್ಮ ತತ್ತ್ವಗಳನ್ನು ಕ್ಷುಲ್ಲಕ ಲಾಭಕ್ಕಾಗಿ ಬಿಟ್ಟುಕೊಡುವವರಾಗಿರಲಿಲ್ಲ. ಕಾರ್ಮಿಕರ ಹಿತ ರಕ್ಷಣೆಯ ವಿಚಾರ ಬಂದಾಗ ತಮ್ಮದೇ ಪಕ್ಷದ ಸರಕಾರವಿದ್ದಾಗಲೂ ಪ್ರತಿಭಟಿಸಲು ಅವರು ಹಿಂಜರಿಯಲಿಲ್ಲ. ದೇಶದ ಇನ್ನೂ ಹಲವು ಬೃಹತ್ ಸಂಸ್ಥೆಗಳ ಸ್ಥಾಪನೆಗೂ ಇವರೇ ಕಾರಣರು. ಭಾರತೀಯ ಕಿಸಾನ್ ಸಂಘ (1979) ಸ್ವದೇಶೀ ಜಾಗರಣ ಮಂಚ್(1991) ಸಾಮಾಜಿಕ ಸಮರಸತಾ ಮಂಚ್, ಸರ್ವ ಪಂಥ ಸಮಾಧಾರ ಮಂಚ್ ಮತ್ತು ಪರ್ಯಾವರಣ ಮಂಚ್, ಅಖಿಲ ಭಾರತ ಅಧಿವಕ್ತಾ ಪರಿಷತ್, ಅಖಿಲ ಭಾರತ ಗ್ರಾಹಕ ಪರಿಷತ್ತು ಮತ್ತು ಭಾರತೀಯ ವಿಚಾರ ಕೇಂದ್ರ ಮುಂತಾದ ಸಂಸ್ಥೆಗಳ ಹುಟ್ಟಿಗೆ ಕಾರಣರಾದ ಇವರು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಸ್ಥಾಪಕ ಸದಸ್ಯರೂ ಆಗಿದ್ದರು.

ಶ್ರೀ ದತ್ತೋಪಂತ ಠೇಂಗಡಿಯವರು ಭಾರತೀಯ ಜನತಾ ಪಕ್ಷದಿಂದ ಎರಡು ಬಾರಿ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು. ದೇಶವನ್ನು ಪ್ರತಿನಿಧಿಸಿ ಹಲವಾರು ದೇಶಗಳಿಗೆ ಭೇಟಿನೀಡಿದ್ದರು. ಅತ್ಯಂತ ಸರಳ ಜೀವನ ನಡೆಸಿದ ದತ್ತೋಪಂತರು ಸದಾ ಅಧ್ಯಯನಶೀಲರಾಗಿದ್ದರು. ಅವರು ತಾವು ನಂಬಿದ ತತ್ತ್ವಗಳಿಗೆ ಬದ್ಧರಾಗಿದ್ದರು. 1975 ರಲ್ಲಿ ಇಂದಿರಾ ಗಾಂಧಿಯವರು ದೇಶದ ಮೇಲೆ ಹೇರಿದ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಜನಾಭಿಪ್ರಾಯವನ್ನೂ ಸಂಘಟಿಸಿದರು. ದೇಶವು ಅವರ ಗೌರವಾರ್ಥ ನೀಡಿದ ಪದ್ಮಭೂಷಣ ಪ್ರಶಸ್ತಿಯನ್ನು ನಯವಾಗಿ ನಿರಾಕರಿಸಿದ ನಿಸ್ಪೃಹ ವ್ಯಕ್ತಿಯಿವರು.

ತಮ್ಮ ಸಂಘಟನೆಗಳ ಚಟುವಟಿಕೆಗಳ ಭಾಗವಾಗಿ ದೇಶದ ಮೂಲೆ ಮೂಲೆಗಳನ್ನು ಸುತ್ತಿದ್ದಲ್ಲದೆ ಅನೇಕ ವಿದೇಶಗಳಿಗೂ ಭೇಟಿ ನೀಡಿದ್ದರು. ಅವರು ಉತ್ತಮ ಭಾಷಣಕಾರರೂ ಬರಹಗಾರರೂ ಆಗಿದ್ದರು. The Third Way; Modernization Without Westernization; What Sustains Sangh?, Our National Renaissance, It's Directions and Destination; Nationalist Pursuit; The great sentinel and The Perspective ಮುಂತಾದ ಅನೇಕ ಪ್ರಸಿದ್ಧ ಪುಸ್ತಕಗಳನ್ನು ಅವರು ಬರೆದಿದ್ದಾರೆ. ಸರ್ವಪಂಥ ಸಮಭಾವ - ದತ್ತೋಪಂತರು ಪ್ರತಿಪಾದಿಸಿದ ಒಂದು ಮುಖ್ಯ ತತ್ತ್ವ.

ಆರೆಸ್ಸೆಸ್ ಸಂಸ್ಥಾಪಕರಾದ ಶ್ರೀ ಎಂ ಎಸ್ ಗೋಳ್ವಲಕರ್, ಪಂಡಿತ ದೀನ ದಯಾಳ ಉಪಾಧ್ಯಾಯ ಮತ್ತು ಡಾ. ಭೀಮರಾವ್ ಅಂಬೇಡ್ಕರ್ ಅವರಿಂದ ಪ್ರಭಾವಿತರಾಗಿದ್ದ ದತ್ತೋಪಂತರು ತಮ್ಮ ೮೪ನೆಯ ವಯಸ್ಸಿನಲ್ಲಿ 14/10/2004 ರಂದು ನಿಧನರಾದರು. ಭಾರತವು ಸ್ವತಂತ್ರದೇಶವಾದರೆ ಸಾಲದು, ತನ್ನ ಸ್ವಂತಿಕೆಯ ಬಲದಿಂದ ದೃಢವಾದ ರಾಷ್ಟ್ರವಾಗಬೇಕೆಂದು ದತ್ತೋಪಂತರು ಬಹುವಾಗಿ ಪ್ರತಿಪಾದಿಸುತ್ತಿದ್ದರು. ಅವರು ಅಂದು ಕಂಡ ಆತ್ಮನಿರ್ಭರ ಭಾರತದ ಕನಸನ್ನು ನನಸುಮಾಡುವ ಹೊಣೆ ಇಂದಿನ ಯುವಜನತೆಯ ಮೇಲಿದೆ.

ಅನಂತಪಥ

Editor: Gopal T.S | Asst. Editor: K . Janardhana Thunga | Layout: Abhishek Gubbi Creatives

Inputs: Diwakar Hegde | Kengeri Chakrapani | Poornaprajna | Sreelakshmi Vishwanath

Photographs: Ananthkumar Pratishthana | Poornaprajna | Adamya Chethana | Kengeri Chakrapani

Acknowledgements: V Nagaraj | All India Radio Mysore | Adamya Chethana | Kavya G Rao | Vilas Vijay Kulakarni

Printed at: Rashtrothana Mudranalaya, Chamrajpet, Bengaluru | Published by: Dr. Tejaswini Ananthkumar

For – AnanthKumar Pratishthana # 12, Sumeru,M N Krishna Rao Road, Basavanagudi, Bangalore – 04

Ph: 080 26568484 | Email: ananth.path@akp.org.in

**ಸ್ಪಷ್ಟನೆ:** ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು;
ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು. ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ.

To get a e-version of this periodical SMS your name and place to 8884182415

# ಅದಮ್ಯ ಚೇತನ
# ADAMYA CHETANA

ಶ್ರೀಮತಿ ಗಿರಿಜಾ ಶಾಸ್ತ್ರಿ ಸ್ಮಾರಕ ಸಂಸ್ಥೆ (ರಿ) Smt. Girija Shastry Memorial Trust (R)
ಸಂಸ್ಥಾಪಕರು : ಶ್ರೀ ಅನಂತಕುಮಾರ್ Founder : Sri AnanthKumar

## ತಿಂಗಳ ವರದಿ (ಆಗಸ್ಟ್ 15 ರಿಂದ ಸೆಪ್ಟೆಂಬರ್15 ರವರೆಗೆ)

ಅದಮ್ಯ ಚೇತನ ಒಂದು ಸ್ವಯಂ ಸೇವಾ ಸಂಸ್ಥೆಯಾಗಿದ್ದು, ಅನ್ನ – ಅಕ್ಷರ - ಆರೋಗ್ಯ ಆರೋಗ್ಯ ಕ್ಷೇತ್ರಗಳಲ್ಲಿ ಹಲವಾರು ವರ್ಷಗಳಿಂದ ಅನೇಕ ಸಾಮಾಜಿಕ ಸೇವಾಕಾರ್ಯಗಳನ್ನು ನಡೆಸುತ್ತ ಬಂದಿದೆ.

### ಪರಿಸರ ಸ್ನೇಹಿ ಗಣಪ

ಅದಮ್ಯ ಚೇತನ ಸಂಸ್ಥೆಯಲ್ಲಿ ಸೆಪ್ಟೆಂಬರ್ 4ರಂದು ಯುವ ಚೇತನದ ಸದಸ್ಯ ಡಾ. ದಿಲೀಪ್ ಅವರು ಮಣ್ಣಿನ ಗಣೇಶ ಮಾಡುವುದನ್ನು ಹೇಳಿಕೊಟ್ಟರು. ಅದಮ್ಯ ಚೇತನದಲ್ಲಿ ಹಾಜರಿದ್ದ ಹತ್ತು ಜನರಲ್ಲದೆ, ಆನ್ ಲೈನಿನಲ್ಲಿ ಮೂವತ್ತು ಜನರು ಮಣ್ಣಿನ ಗಣೇಶ ಮಾಡುವುದನ್ನು ಕಲಿತು ಮೂರ್ತಿಗಳನ್ನು ಮಾಡಿದರು.

ಅದಮ್ಯ ಚೇತನ ಸಂಸ್ಥೆಯ ಸಹಯೋಗದಲ್ಲಿ ಉತ್ತಿಷ್ಠ ಭಾರತ ತಂಡದ ವತಿಯಿಂದ ದಿನಾಂಕ ಸೆಪ್ಟೆಂಬರ್ 5 ರಂದು ಪರಿಸರ ಸಂರಕ್ಷಣೆ ನಿಟ್ಟಿನಲ್ಲಿ ವಿನೂತನ ಕಾರ್ಯಕ್ರಮ "ಪರಿಸರ ಸ್ನೇಹಿ ಗಣಪ" ಎಂಬ ಗಣಪತಿಯನ್ನು ತಯಾರಿಸುವ ಕಾರ್ಯಾಗಾರವು ಬೆಂಗಳೂರಿನ ವಿದ್ಯಾಪೀಠದ ಶ್ರೀ ಗಣೇಶ, ಶ್ರೀ ಸುಬ್ರಹ್ಮಣ್ಯ, ಶ್ರೀ ಅಯ್ಯಪ್ಪ ದೇವಸ್ಥಾನಗಳಲ್ಲಿ ಯಶಸ್ವಿಯಾಗಿ ನಡೆಯಿತು. ಈ ತರಬೇತಿ ಕಾರ್ಯಾಗಾರವನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಉದ್ಘಾಟಿಸಿದರು.

80 ಕ್ಕೂ ಹೆಚ್ಚು ಉತ್ಸಾಹಿಗಳು ಬಹಳ ಶ್ರದ್ಧೆಯಿಂದ ಮಣ್ಣಿನಲ್ಲಿ ಪರಿಸರ ಸ್ನೇಹಿ ಗಣೇಶನ ವಿಗ್ರಹಗಳನ್ನು ತಯಾರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥೆ ಶ್ರೀಮತಿ ಡಾ. ತೇಜಸ್ವಿನಿ ಅನಂತ ಕುಮಾರ್ ಭಾಗವಹಿಸಿ ಪರಿಸರ ಸ್ನೇಹಿ ಗಣಪತಿ ವಿಗ್ರಹದ ಅಗತ್ಯ ಮತ್ತು ಗಣಪತಿಯ ವಿಗ್ರಹಗಳಲ್ಲಿ ಕೃತಕ ಬಣ್ಣದ ಉಪಯೋಗದಿಂದ ಪರಿಸರ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಿದರು. ಅದಮ್ಯಚೇತನದ ಹಸಿರು ಭಾನುವಾರ ದ ಪ್ರಯುಕ್ತ ಹೂವಿನ ಗಿಡಗಳನ್ನು ನೆಡಲಾಯಿತು

### ಗಣೇಶೋತ್ಸವ

ಅದಮ್ಯ ಚೇತನ ಸಂಸ್ಥೆಯ ಕಛೇರಿಯಲ್ಲಿ ಗಣೇಶೋತ್ಸವವನ್ನು ಸಂಭ್ರಮ, ಉತ್ಸಾಹಗಳಿಂದ ಆಚರಿಸಲಾಯಿತು. ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಡಾ. ತೇಜಸ್ವಿನಿ ಅನಂತಕುಮಾರ್ ಉಪಸ್ಥಿತಿಯಲ್ಲಿ ಸಂಸ್ಥೆಯ ಎಲ್ಲ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

### 300ನೇ ವಾರದತ್ತ 'ಹಸಿರು ಬೆಂಗಳೂರು'

ಹಸಿರು ಕ್ರಾಂತಿಯ ಹರಿಕಾರರಾದ ಶ್ರೀಯುತ ಅನಂತಕುಮಾರ್ ಅವರು ಪ್ರಾರಂಭಿಸಿದ ಜನಪ್ರಿಯ ಪ್ರಕಲ್ಪವಾದ ಹಸಿರು ಭಾನುವಾರ ನಿರಂತರವಾಗಿ ಕಳೆದ ಐದೂವರೆ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ . ಕೋವಿಡ್ ನ ಇಂತಹ ವಿಷಮ ಪರಿಸ್ಥಿತಿಯಲ್ಲಿಯೂ ಕಳೆದ ಒಂದು ತಿಂಗಳು ನಮ್ಮ ಹಸಿರು ಸೇನಾನಿಗಳು ಹೆಬ್ಬಾಳದ ಮುನಿಸ್ವಾಮಿ ಗೌಡ ಬಡಾವಣೆ, ವಿನಾಯಕ ಲೇಔಟ್, ಆರೆನ್ನೆಸ್ ಫರ್ಸ್ಟ್ ಗ್ರೇಡ್ ಕಾಲೇಜು, ಚನ್ನಸಂದ್ರ, ಕೆಂಪೇಗೌಡ ಆಟದ ಮೈದಾನ, ಬಿ.ಟಿ.ಎಮ್ ಲೇಔಟ್, ಜಯನಗರ ನಾಲ್ಕನೇ ಬ್ಲಾಕ್, ಬಸವನಗುಡಿ ಮೊದಲಾದ ಕಡೆಗಳಲ್ಲಿ ಪ್ರತಿ ಭಾನುವಾರವೂ ಯಶಸ್ವಿಯಾಗಿ ನಡೆಸಿರುತ್ತಾರೆ. ಬುಗುರಿ ಗಿಡ, ಹೊಂಗೆ, ನೇರಳೆ, ಹಲಸು ಇತ್ಯಾದಿಗಳನ್ನು ನಮ್ಮ ಅದಮ್ಯ ಚೇತನ ನರ್ಸರಿಯಿಂದಲೇ ಆಯ್ದು ನಿಗದಿತ ಜಾಗಗಳಲ್ಲಿ ಪ್ರತಿ ಭಾನುವಾರ ಗಿಡ ನೆಡುವ ಕೆಲಸವನ್ನು ಶ್ರದ್ಧೆಯಿಂದ ಮಾಡಲಾಗುತ್ತಿದೆ.

### ಬಳ್ಳಾರಿಯಲ್ಲಿ ಶತಕ ಬಾರಿಸಿದ ಸಸ್ಯಾಗ್ರಹ

ಬೆಂಗಳೂರಿನಲ್ಲಿ ಹಸಿರು ಭಾನುವಾರ ಕಾರ್ಯಕ್ರಮಗಳಲ್ಲಿ ಸಕ್ರಿಯ ಕಾರ್ಯಕರ್ತೆಯಾಗಿರುವ ಶ್ರೀಮತಿ ಹರಿಣಿಯವರ ಉತ್ಸಾಹ, ಪ್ರೋತ್ಸಾಹಗಳು









ಬೆಂಗಳೂರು ದೂರದರ್ಶನ ಕೇಂದ್ರದ 'ಹಲೋ ಗೆಳೆಯರೇ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಪರಿಸರ ಸ್ನೇಹಿ ಗೌರಿ ಗಣೇಶ ಹಬ್ಬದ ಆಚರಣೆಯ ಬಗೆಗೆ ತಿಳಿಸಿಕೊಟ್ಟರು.

ದೂರದ ಬಳ್ಳಾರಿಯಲ್ಲಿ ಭಾನುವಾರಗಳಂದು ಸಸ್ಯಾಗ್ರಹ ನಡೆಸಲು ಪ್ರೇರಣೆ ನೀಡಿವೆ.

ಬಳ್ಳಾರಿಯಲ್ಲಿ ಕಳೆದ ನೂರು ವಾರಗಳಿಂದ ನಡೆಯುತ್ತಿರುವ ನಿರಂತರವಾಗಿ ನಡೆಯುತ್ತಿರುವ ಹಸಿರು ಭಾನುವಾರ ಕಾರ್ಯಕ್ರಮದ ನೇತೃತ್ವವನ್ನು ಹಸಿರು ಯೋಧರಾದ ಶ್ರೀ ಪ್ರಕಾಶ್ ಮತ್ತು ಶ್ರೀ ನರಸಿಂಹ ಪ್ರಸಾದ್ ವಹಿಸಿದ್ದರು. ಸಾಗರದ ಪ್ರಗತಿನಗರದಲ್ಲಿ ಶ್ರೀಮತಿ ಸುಜಾತರವರು ಹಸಿರು ಭಾನುವಾರ ಆಚರಿಸಿದರು.

### ನಿತ್ಯ ಅನ್ನದಾನ



ಅದಮ್ಯ ಚೇತನದ ಗವೀಪುರ ಕೇಂದ್ರ, ಜಯನಗರ, ಮಾರೇನಹಳ್ಳಿ, ಮತ್ತು ನಗರ್ತಪೇಟೆಯಲ್ಲಿ ಕಳೆದ ನವೆಂಬರ್ 2020ರಿಂದ ನಿತ್ಯ ಅನ್ನದಾನ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯುತ್ತಿದೆ. ಪ್ರತಿನಿತ್ಯ ಸೇವಾ ಬಸ್ತಿಗಳ ಸುಮಾರು 200 ಜನರೂ ಸೇರಿದಂತೆ ಒಟ್ಟು ಒಟ್ಟು 800 ಜನರಿಗೆ ಊಟ ನೀಡಲಾಗುತ್ತಿದೆ. ಇದುವರೆಗೆ ಸುಮಾರು 1,50,000 ಜನರು ಈ ಸೇವಾ ಯೋಜನೆಯ ಫಲಾನುಭವಿಗಳಾಗಿದ್ದಾರೆ.

### ನಮ್ಮ ಕ್ಯಾಂಟೀನ್

ನಮ್ಮ ಕ್ಯಾಂಟೀನುಗಳ (ಇಂದಿರಾ ಕ್ಯಾಂಟೀನ್) ಬೆಂಗಳೂರು ಪೂರ್ವ ವಿಭಾಗದ 40 ವಿತರಣಾ ಕೇಂದ್ರಗಳ ಮೂಲಕ ಪ್ರತಿದಿನ ಸಾವಿರಾರು ಜನರಿಗೆ ಊಟದ ಪೂರೈಕೆಯನ್ನು ಅದಮ್ಯ ಚೇತನ ಸಂಸ್ಥೆ ಮಾಡುತ್ತಿದೆ. ವಾರದ ಏಳು ದಿನಗಳಲ್ಲೂ ದಿನದ ಮೂರೂ ಹೊತ್ತು ಶುಚಿ ರುಚಿಯಾದ ಊಟ ಸರಬರಾಜು ಮಾಡಲಾಗುತ್ತಿದೆ.

### ಆಹಾರ ಕಿಟ್ ವಿತರಣೆ

ಬೆಂಗಳೂರಿನ 'ಅನ್ನಪೂರ್ಣ' ಅಡುಗೆ ಮನೆಯಿಂದ ಪ್ರತಿದಿನ ಶಾಲೆಗಳಿಗೆ ಬಿಸಿಯೂಟ ನೀಡಲಾಗುತ್ತಿತ್ತು., ಆದರೆ ಈಗ ಕೋವಿಡ್ ಕಾರಣದಿಂದಾಗಿ, ಶಾಲೆಗಳಿಗೆ ಬಿಸಿಯೂಟದ ಬದಲಾಗಿ ಸರ್ಕಾರದ ಆದೇಶದಂತೆ ಪ್ರತಿ ಶಾಲೆಯ ಮಕ್ಕಳಿಗೆ ಅಕ್ಕಿ, ಬೇಳೆ, ಎಣ್ಣೆ ಮತ್ತು ಉಪ್ಪು ಹಾಗೂ ವಿಶೇಷವಾಗಿ ಹಾಲಿನ ಪುಡಿಯನ್ನು ಸಹ ವಿತರಿಸಲಾಗುತ್ತಿದೆ.

ಅದಮ್ಯ ಚೇತನ ಸಂಸ್ಥೆಯು ಪ್ರತಿದಿನ 260 ಶಾಲೆಗಳಿಗೆ ಮಧ್ಯಾಹ್ನದ ಬಿಸಿಯೂಟ ಸರಬರಾಜು ಮಾಡುವ ಹೊಣೆ ಹೊತ್ತಿದ್ದು ಈ ಎಲ್ಲ ಶಾಲೆಗಳ ಪ್ರತಿಯೊಬ್ಬ ವಿದ್ಯಾರ್ಥಿಗೆ ಅಗತ್ಯವಿರುವ ನಿಗದಿತ ಪ್ರಮಾಣದ ಆಹಾರ ಸಾಮಗ್ರಿಗಳನ್ನು ಒಟ್ಟಾರೆಯಾಗಿ ಆಯಾ ಶಾಲೆಗಳಿಗೆ ತಲುಪಿಸಲಾಗುತ್ತಿದೆ.

### ದೇಗುಲ ದರ್ಶನಮಾಲಿಕೆ

ಅದಮ್ಯ ಚೇತನದಿಂದ 'ದೇಗುಲ ದರ್ಶನ ಮಾಲಿಕೆ' ಎಂಬ ಕಾರ್ಯಕ್ರಮದ ಸೆಪ್ಟೆಂಬರ್ ತಿಂಗಳ ಕಾರ್ಯಕ್ರಮವು 13/09/2021 ರಂದು ನಡೆಯಿತು. "ಕೋಲಾರ ಜಿಲ್ಲೆಯ ಕೆಲವು ಪ್ರಾಚೀನ ದೇವಾಲಯಗಳು" ಎಂಬ ವಿಷಯದ ಮೇಲೆ ಶ್ರೀ ಕೆಂಗೇರಿ ಚಕ್ರಪಾಣಿಯವರು ಉತ್ತಮ ಉಪನ್ಯಾಸ ನೀಡಿದರು. ಚಿಕ್ಕನ ಹಳ್ಳಿ, ಉತ್ತನೂರು, ಕೋಲಾರ, ತೇರಹಳ್ಳಿ, ನರಸಾಪುರ ಮತ್ತು ಬೆಳ್ಳೂರಿನ ಅಷ್ಟೇನೂ ಪರಿಚಿತವಲ್ಲದ ಪ್ರಾಚೀನ ದೇವಾಲಯಗಳ ಇತಿಹಾಸ, ಶಿಲ್ಪಕಲಾ ವಿಶೇಷ, ಸ್ಥಳಪುರಾಣ, ಶಾಸನ, ವೀರಗಲ್ಲುಗಳನ್ನು ಪರಿಚಯಿಸಿದರು. ಅನಂತಪಥ ಪತ್ರಿಕೆಯ ಸಂಪಾದಕರಾದ ಶ್ರೀ ಟಿ ಎಸ್ ಗೋಪಾಲರವರು ಪ್ರವಾಸಿ ಮಾರ್ಗದರ್ಶನ ನೀಡಿದರು. ಶ್ರೀಮತಿ ತೇಜಸ್ವಿನಿ ಅನಂತಕುಮಾರರು ಅಧ್ಯಕ್ಷತೆ ವಹಿಸಿದ್ದ ಈ ಕಾರ್ಯಕ್ರಮವನ್ನು ಶ್ರೀ ನಾಗೇಂದ್ರ ನಿರೂಪಿಸಿದರು.

## ಅದಮ್ಯ ಸೇವಾ

**( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )**



ಇತ್ತೀಚೆಗೆ ಬೆಂಗಳೂರಿಗೆ ಆಗಮಿಸಿದ್ದ ಉಪರಾಷ್ಟ್ರಪತಿ ಶ್ರೀ ಎಂ. ವೆಂಕಯ್ಯ ನಾಯ್ಡು ರವರನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭೇಟಿಮಾಡಿ ಸಂದರ್ಭ




ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಆಶ್ರಯದಲ್ಲಿ ನಡೆದ "ಸುಸ್ಥಿರ ಜೀವನಕ್ಕಾಗಿ ವಿಜ್ಞಾನ " ಸಮಾವೇಶದಲ್ಲಿ ಶ್ರೀ ನಿರ್ಮಲಾನಂದ ಸ್ವಾಮೀಜಿ ಮೊದಲಾದವರೊಡನೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭಾಗವಹಿಸಿದ್ದರು



ಅದಮ್ಯ ಚೇತನದಲ್ಲಿ ಶ್ರೀ ಗಣೇಶ ಪ್ರತಿಷ್ಠಾಪನೆ



ಅದಮ್ಯ ಚೇತನ ಸಂಸ್ಥೆಯ ಸಹಯೋಗದಲ್ಲಿ ದಿನಾಂಕ ಸೆಪ್ಟೆಂಬರ್ 5 ರಂದು ಪರಿಸರ ಸ್ನೇಹಿ ಗಣಪತಿಯನ್ನು ತಯಾರಿಸುವ ಕಾರ್ಯಾಗಾರ ಬೆಂಗಳೂರಿನ ವಿದ್ಯಾಪೀಠದ ಶ್ರೀ ಗಣೇಶ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ನಡೆದ ಸಂದರ್ಭ



ಬೆಂಗಳೂರಿನ ಆರ್. ಎನ್. ಎಸ್. ಕಾಲೇಜಿನಲ್ಲಿ ಆಚರಿಸಲಾದ ಸ್ವಾತಂತ್ರ್ಯ ದಿನೋತ್ಸವದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು




ವಿದ್ಯಾಪೀಠದಲ್ಲಿ ನಡೆದ 298ನೇ ಹಸಿರು ಭಾನುವಾರ ಕಾರ್ಯಕ್ರಮ

## ಅನಂತ ಚಿತ್ರಸಂಪುಟ


# ಸಂಸದೀಯ ವ್ಯವಹಾರಗಳ ಸಚಿವರಾಗಿ ಶ್ರೀ ಅನಂತಕುಮಾರ್



ಮುಂಬರಲಿದ್ದ ಸಂಸತ್ ಅಧಿವೇಶನಕ್ಕಾಗಿ ಪೂರ್ವಸಿದ್ಧತಾ ಸಭೆಯಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರೊಡನೆ ಆಗಮಿಸುತ್ತಿರುವ ಅನಂತಕುಮಾರ್ (ಜುಲೈ 17, 2018 )




ಸಂಸದೀಯ ಪ್ರಜಾಪ್ರಭುತ್ವವನ್ನು ಬಲಪಡಿಸಲು 2018 ಜುಲೈಯಲ್ಲಿ ಏರ್ಪಡಿಸಲಾಗಿದ್ದ ಸಂಶೋಧನಾ ಸಮಾವೇಶದಲ್ಲಿ ರಾಷ್ಟ್ರಪತಿ ಶ್ರೀ ರಾಮನಾಥ ಕೋವಿಂದ್ ಮತ್ತು ಆಗಿನ ಲೋಕಸಭಾಧ್ಯಕ್ಷರಾದ ಶ್ರೀಮತಿ ಸುಮಿತ್ರಾ ಮಹಾಜನ್ ಅವರೊಂದಿಗೆ



ಸಂಸತ್ತಿನಲ್ಲಿ ಮಹತ್ತ್ವದ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿರುವ ಶ್ರೀ ಅನಂತಕುಮಾರ್



ಡಿಸೆಂಬರ್ 2017ರ ಚಳಿಗಾಲದ ಅಧಿವೇಶನದ ಸಂದರ್ಭದಲ್ಲಿ ಪತ್ರಿಕಾಗೋಷ್ಠಿ ನಡೆಸುತ್ತಿರುವ ಪ್ರಧಾನಿ ಶ್ರೀ ನರೇಂದ್ರ ಮೋದಿಯವರೊಡನೆ



ದೇಶದ ಮುನ್ನಡೆಗೆ ಎಲ್ಲರ ಸಹಕಾರ - ಶ್ರೀ ಮಲ್ಲಿಕಾರ್ಜುನ ಖರ್ಗೆ ಮೊದಲಾಗಿ ಎಲ್ಲ ಪಕ್ಷಗಳ ಧುರೀಣರೊಡನೆ ಕೈಜೋಡಿಸುವ ಪ್ರಯತ್ನ  (ಜುಲೈ 2018)




ಪ್ರವಾಸಿ ಸಾಂಸದ ಸಮಾವೇಶದಲ್ಲಿ ಭಾಷಣ ಮಾಡುತ್ತಿರುವ ಶ್ರೀ ಅನಂತಕುಮಾರ್ (ಜನವರಿ 2018)

ಅನಂತಪಥ

ಅನಂತಪಥ ಮಾಸಪತ್ರಿಕೆಯು ಪ್ರತಿ ತಿಂಗಳ 22ನೆಯ ತಾರೀಕು ತಪ್ಪದೆ ಪ್ರಕಟವಾಗುತ್ತಿದೆ. ಈ ಪತ್ರಿಕೆಯ ಚಂದಾದಾರರಾಗಿ ಅನಂತಕುಮಾರ್ ಪ್ರತಿಷ್ಠಾನದ ಸೇವಾಚಟುವಟಿಕೆಗಳನ್ನು ಪ್ರೋತ್ಸಾಹಿಸಿ.

ರೂ. 1000 ನೀಡಿ  ಚಂದಾದಾರರಾಗಲು ಮತ್ತು ಇತರ ವಿವರಗಳಿಗೆ ಈ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ: **8884182415**